# ನಾದ ನೂಪುರ ವಂಡಾರು

# Nadanoopura Vandaru




ಮುಖ್ಯಸ್ಥರು – ವಂಡಾರು ಗೋವಿಂದ
97418 47278
ಪ್ರಧಾನ ಸಂಪಾದಕರು – ಶುಭಾಶಯ
ಗೌರವ ಸಂಪಾದಕರು – ಅಜಿತ್ ಕಾರಂತ್
94496 86807



Nadanoopura Yakshothana Trust (NYT) (R.) Vandaru
Marvi, Vandaru village and Post, Brahmavara Taluk,
Udupi District – 576223
Email : nadanoopuravandaru@gmail.com


**ನಮ್ಮ ಓದುಗರಿಗೆ ಯುಗಾದಿ ಹಬ್ಬದ (ಶುಭಕೃತ್ ಸಂವತ್ಸರದ) ಹಾರ್ದಿಕ ಶುಭಾಶಯಗಳು**

ಪರಿವಿಡಿ


ಬೋರ್ಡ್ ರೂಮ್
ಸಂಪಾದಕೀಯ
ಕೊರೋನೋತ್ತರ ಪ್ರದರ್ಶನಕ್ಕೆ ನಾವು ಸಿದ್ಧ – ಪ್ರಚಲಿತ– ಶಾಂತಾರಾಮ ಕುಡ್ವ
ಪ್ರಸಂಗ ವಿಹಾರ – ರವಿ ಮಡೋಡಿ
ಕಾಲಮಿತಿ ಹಾಗು ಹಗಲಾಟದ ನೋಟ – ಪ್ರಚಲಿತ – ಉದಯ್ ಕುಮಾರ್ ಶೆಟ್ಟಿ
ಧೀರ ಕಲೆಯೊಳಗೆ ಕೀರವಾಣಿಯರು – ಸಾಯಿಸುಮ ನಾವುಡ ಕಾರಿಂಜ
ಕಾಡುವ ಸನ್ನಿವೇಶ
1.. ಪದ್ಯಾಣ ಶಂಕರ ನಾರಾಯಣ ಭಟ್
2. ಹಳ್ಳಾಡಿ ಜಯರಾಮ ಶೆಟ್ಟಿ
ನಮ್ಮ ಲೈಬ್ರರಿ – ಕಟೀಲು ಕ್ಷೇತ್ರ ಮಹಾತ್ಮೆ
ಯಕ್ಷ ಸಂಪನ್ಮೂಲ
ಚಾರಿಟಿ ರೂಮ್
ರಸಸ್ಫುರಣ – ರಜನೀಶ್ ಹೊಳ್ಳ


## ಬೋರ್ಡ್ ರೂಮ್



ವಂಡಾರು ಗೋವಿಂದ

ಸ್ನೇಹಿತರೆ ನಮಸ್ಕಾರ,

ಎಪ್ರಿಲ್ 17 ಕ್ಕೆ ಸರಿಯಾಗಿ ನಮ್ಮ ಅಕ್ಕರೆಯ ಕಲಾ ಕೈಂಕರ್ಯದ ಕನಸಾದ ನಾದನೂಪುರ ಟ್ರಸ್ಟ್ ಗೆ 1 ವರ್ಷ ತುಂಬುತ್ತದೆ. ಈ ಒಂದು ವರ್ಷದಲ್ಲಿ ನಮ್ಮೆಡೆ ಕುತೂಹಲದಿಂದ ನೋಡಿದ ಕಣ್ಣುಗಳು ಹಲವು. ಹತ್ತರಲ್ಲಿ ಹನ್ನೊಂದು ಎಂಬಂತಹ ಟ್ರಸ್ಟಾಗಿ ಉಳಿದು ಬಿಡಬಾರದೆಂಬ ಸಾಲಿಡ್ ಕಮಿಟ್ ಮೆಂಟ್ ನೊಂದಿಗೆ ಕಲಾಸೇವೆಯ ಕನಸುಗಳನ್ನು ಬರೆಯುತ್ತಿದ್ದೇವೆ. 17 ವರ್ಷಗಳಿಂದ ಸತತ ಗೆಜ್ಜೆ ಕಟ್ಟಿ ಕುಣಿದು ಗಳಿಸಿದ ಖ್ಯಾತಿ, ಕಟ್ಟಿಕೊಂಡ ಬದುಕು, ಪಡೆದುಕೊಂಡ ಆತ್ಮಾನಂದದ ಫಲಶ್ರುತಿಯೇ ಮರಳಿ ಕಲೆಗೆ ಕಿಂಚಿತ್ ನೀಡಬೇಕೆನ್ನುವ ತುಡಿತ. ಆ ತುಡಿತಕ್ಕೆ ಮನಮೆಚ್ಚಿದ ಹೆಸರೇ ನಾದನೂಪುರ. ನನ್ನ ಬಳಗವೂ ಇದೇ ಹೆಸರನ್ನು ಒಪ್ಪಿಕೊಂಡಿತ್ತು. ವಂಡಾರು ಗ್ರಾಮದಲ್ಲಿ ನನ್ನದೇ ನಿವಾಸದಲ್ಲಿ ಒಂದು ಭಾಗವನ್ನು ಟ್ರಸ್ಟ್ ನ ಕಛೇರಿಯನ್ನಾಗಿ ಮಾಡಿಕೊಂಡೆವು. ಪ್ರತಿಫಲವೇನೂ ಅಪೇಕ್ಷೆ ಮಾಡದೇ ಕೆಲವೊಂದು ಕೆಲಸಗಳಿಗೆ ಉತ್ಸಾಹದಿಂದ ತೊಡಗಿಸಿಕೊಂಡೆವು. ಗುಣಾತ್ಮಕ ಹಾಗೂ ಪ್ರಯೋಗಾತ್ಮಕ ಯಕ್ಷಗಾನ ಕಾರ್ಯಕ್ರಮ ನೀಡುವುದು, ಈ ಮೂಲಕ ಸಹ ಕಲಾವಿದರ ಉದ್ಯೋಗಕ್ಕೆ ದಾರಿ, ಸಂಶೋಧನಾತ್ಮಕ ಚಟುವಟಿಕೆಗಳನ್ನು ಯೋಜಿಸುವುದು, ಯಕ್ಷಗಾನ ತರಗತಿಗಳನ್ನು ನಡೆಸಲು ರೂಪು ರೇಷೆ, ಅಗತ್ಯ ಕಲಾವಿದರಿಗೆ ನೆರವು, ಈ ಮೊದಲಾದ ಅಂಶಗಳನ್ನು ಟ್ರಸ್ಟ ನ ಮೂಲ ಗುರಿ ಉದ್ದೇಶಗಳನ್ನಾಗಿ ರೂಪಿಸಿಕೊಂಡೆವು. ಮೊದಲ ವರ್ಷದಲ್ಲಿ ಚೊಚ್ಚಲ ಕಾರ್ಯಕ್ರಮವಾಗಿ ಶತರೂಪಾ ಮತ್ತು ನೀಲಾಂಜನೆ ಎಂಬ ಪೌರಾಣಿಕ ಪ್ರಸಂಗಗಳನ್ನು ಯೂಟ್ಯೂಬ್ ನಲ್ಲಿ ಪ್ರಸಾರ ಮಾಡಿದೆವು. ಜನರಿಂದ ಕಲಾಭಿಮಾನಿಗಳಿಂದ ಇದಕ್ಕೆ ಸಿಕ್ಕ ಪ್ರತಿಕ್ರಿಯೆ ಅತ್ಯದ್ಬುತ. ಆ ಚಿಕ್ಕ ಕಾರ್ಯಕ್ಕೆ ಸಿಕ್ಕ ದೊಡ್ಡ ಪ್ರೋತ್ಸಾಹವೇ ಇಂದು ಮತ್ತೊಂದು ಹೆಜ್ಜೆ ಮುಂದಿಡಲು ಪ್ರೇರಣೆಯಾಗಿದೆ. ಅದು ನಾದ ನೂಪುರ ವಂಡಾರು ಡಿಜಿಟಲ್–ಪತ್ರಿಕೆ. ಶುಭಕೃತ್ ಸಂವತ್ಸರದ (2022) ಯುಗಾದಿಗೆ ನಾದನೂಪುರ ಯಕ್ಷೋತ್ಥಾನ ಟ್ರಸ್ಟ್ ಮೂಲಕ ಹೊರಬರುತ್ತಿರುವ ಮೊದಲ ಡಿಜಿಟಲ್–ಪತ್ರಿಕೆಯನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ಸಂತಸವೆನಿಸುತ್ತಿದೆ. ಈಗಾಗಲೇ ಯಕ್ಷಗಾನ ಕ್ಷೇತ್ರಕ್ಕೆ ಸಂಬಂಧಿಸಿದ ಸುದ್ದಿ, ವಿಚಾರ ವಿಮರ್ಶೆಗಳನ್ನು ಹಂಚಿಕೊಳ್ಳುತ್ತಿರುವ ಅನೇಕ ಪತ್ರಿಕೆಗಳು ಮಾರುಕಟ್ಟೆಯಲ್ಲಿವೆ. ಆದರೂ ಮತ್ತೊಂದೇಕೆ ಎಂಬ ಪ್ರಶ್ನೆಗೆ ಉತ್ತರ ನಮ್ಮ ಟ್ರಸ್ಟ್ ನ ಧ್ಯೇಯೋದ್ದೇಶಗಳು. ಸಂಶೋಧನಾತ್ಮಕ ಚಟುವಟಿಕೆಗಳಲ್ಲಿ ಟ್ರಸ್ಟ್ ತೊಡಗಿಸಿಕೊಳ್ಳಬೇಕು ಎಂಬುದು ಟ್ರಸ್ಟ್ ನ ಒಂದು ಉದ್ದೇಶವಾಗಿದ್ದು ಸಂಶೋಧನೆಗೆ ಪೂರ್ವಭಾವಿಯಾಗಿ ಡಾಕ್ಯುಮೆಂಟರಿ ತೀರಾ ಅತ್ಯಗತ್ಯವೆನಿಸಿದೆ. ಈ ನಿಟ್ಟಿನಲ್ಲಿ ಪತ್ರಿಕಾ ವರದಿ ಹಾಗೂ ಸುದ್ದಿಗಳು ಪ್ರಮುಖ ದಾಖಲೆ ಎನಿಸಿಕೊಳ್ಳುತ್ತವೆ. ಅಷ್ಟೇ ಅಲ್ಲದೆ ಕಲೆ ಯಕ್ಷಗಾನ ಸಾಹಿತ್ಯ ಹಾಗೂ ಕಲಾವಿದರಿಗೆ ಸಂಬಂಧಿಸಿದ ಉಪಯುಕ್ತ ಲೇಖನಗಳನ್ನು ಜನರಿಗೆ ತಲುಪಿಸುವಲ್ಲಿಯೂ ಟ್ರಸ್ಟ್ ನ ಟೀಂ ಪ್ರಾಮಾಣಿಕವಾಗಿ ಕೆಲಸ ಮಾಡಲಿದೆ. ಕಲಾವಿದರ, ಆಸಕ್ತಿಯ ಕಿರು ಮಾಹಿತಿಗಳು ಯಕ್ಷಗಾನ ಕ್ಷೇತ್ರದ ಪ್ರಸ್ತುತ ಬೆಳವಣಿಗೆಗಳು, ವಿಮರ್ಶಾತ್ಮಕ ಲೇಖನ, ಪುಸ್ತಕ ಪರಿಚಯ, ಸಾಧಕ ಕಲಾವಿದರ ಜೀವನಗಾಥೆಯ ಸರಣಿ ಲೇಖನ ಮಾಲೆ, ಹೀಗೆ ಚಿಕ್ಕದಾಗಿ ಕೆಲವೇ ಅಂಕಣಗಳನ್ನೊಳಗೊಂಡ ಪತ್ರಿಕೆಯ ಅಕ್ಷರ ಲೋಕಕ್ಕೆ ಸಮರ್ಪಣೆಯಾಗಿದೆ. ಈ ಡಿಜಿಟಲ್ ಪತ್ರಿಕೆಯ ಪ್ರಧಾನ ಸಂಪಾದಕರಾಗಿ ಶುಭಾಶಯ, ಹಾಗು ಗೌರವ ಸಂಪಾದಕರಾಗಿ ಶ್ರೀ ಅಜಿತ್ ಕಾರಂತ್ ರವರು ಈ ಡಿಜಿಟಲ್ ಪತ್ರಿಕೆಯನ್ನು ಮುನ್ನಡೆಸಲಿದ್ದಾರೆ. ಸಕಾಲಿಕ ವಿಚಾರಗಳ ಬಗ್ಗೆ ಶಾಂತಾರಾಮ ಕುಡ್ವರು ಹಾಗು ಪ್ರೊ. ಉದಯ್ ಕುಮಾರ್ ಶೆಟ್ಟಿಯವರ ಸಮರ್ಥ ಲೇಖನಗಳು ಓದುಗರನ್ನು ಚಿಂತನೆಗೆ ಹಚ್ಚಲಿದೆ. ಮಹಿಳಾ ಸಾಧಕಿಯರ ಬಗ್ಗೆ ಯಕ್ಷಗಾನದ ಯುವ ಕಲಾವಿದೆ ಸಾಯಿಸುಮ ನಾವುಡ ನಿರೂಪಿಸಲಿದ್ದಾರೆ. ಕಾಡುವ ಸನ್ನಿವೇಶ ಅಂಕಣದಲ್ಲಿ ಹಲವಾರು ಕಲಾವಿದರು ತಮ್ಮ ಆಪ್ತ ಕ್ಷಣ/ ಅನುಭವಗಳನ್ನು ಹಂಚಿಕೊಳ್ಳಲಿದ್ದಾರೆ. ಈ ಬಾರಿ ಮದ್ದಳೆಗಾರರಾದ ಪದ್ಯಾಣ ಶಂಕರ ನಾರಾಯಣ ಭಟ್ ಹಾಗು ಹಾಸ್ಯಗಾರ ಹಳ್ಳಾಡಿ ಜಯರಾಮ ಶೆಟ್ಟಿಯವರ ಮನದಾಳದ ಮಾತುಗಳು ಪ್ರಕಟವಾಗಿವೆ. ನಮ್ಮ ಲೈಬ್ರರಿ ಅಂಕಣದಲ್ಲಿ, ಯಕ್ಷಗಾನ ಕೃತಿಗಳ ಪರಿಚಯ ತೆರೆದುಕೊಳ್ಳಲಿದೆ. ಡಿಬೇಟ್ ಕಾರ್ನರ್ ನಲ್ಲಿ ಯಕ್ಷಗಾನದ ಬದಲಾವಣೆ ಬೆಳವಣಿಗೆಗಳ ಬಗ್ಗೆ ಆರೋಗ್ಯಕರ ಚರ್ಚೆ ನಡೆಯಲಿದೆ. ಅಷ್ಟೇ ಅಲ್ಲದೆ ನೀವು ವಿಶೇಷ ಸುದ್ದಿಗಳಿದ್ದರೆ ನಮ್ಮ ಡಿಜಿಟಲ್ ಪತ್ರಿಕೆಗೆ ಬರೆದು ಕಳುಹಿಸಬಹುದು ಈಗಾಗಲೇ ಜನಪ್ರಿಯವಾಗಿರುವ ಪತ್ರಿಕೆಗಳ ಮಟ್ಟಕ್ಕೆ ವಿಚಾರಗಳು ಇಲ್ಲದೇ ಹೋದರೂ ಮೌಲ್ವಿಕ ವಿಚಾರ ಹಾಗೂ ಸುದ್ದಿಗಳಿಂದ ಮುಂದೆ ನಿಮಗೆ ಆಪ್ತವಾಗಲಿದ್ದೇವೆ. ನಿಮ್ಮ ಸಹಕಾರ ಬೆಂಬಲ, ನಿರಂತರ ಸಂಪರ್ಕ ನಮ್ಮನ್ನು ಬೆಳೆಸುವಲ್ಲಿ ಕೊಡುಗೆಯಾಗಲಿ ಎಂಬ ನಿರೀಕ್ಷೆ ನಮ್ಮದು. ನಮ್ಮ ಈ ಪತ್ರಿಕೆಯನ್ನೂ ಪ್ರೀತಿಯಿಂದ ನಿಮ್ಮ ಮಡಿಲಿಗೆ ಹಾಕಿಕೊಳ್ಳುತ್ತೀರಿ ಎಂಬ ಭರವಸೆಯೊಂದಿಗೆ

**ನಿಮ್ಮವನೇ**

**ವಂಡಾರು ಗೋವಿಂದ, ಮೆನೇಜಿಂಗ್ ಟ್ರಸ್ಟಿ**

ನಾದನೂಪುರ ಯಕ್ಷೋತ್ಥಾನ ಟ್ರಸ್ಟ್

***ನಿಮಗಿದು ಗೊತ್ತೇ? – 1930 ರಲ್ಲಿ ಶ್ರೀ ದೇವಿ ಮಹಾತ್ಮೆ ಯಕ್ಷಗಾನವು ಕಾಸರಗೋಡು ಸಮೀಪದ ಕೊರಕ್ಕೋಡು ಎಂಬಲ್ಲಿ ಮೊದಲ ಪ್ರದರ್ಶನ ಕಂಡಿತು. ಅಂದಿನ ಪ್ರಥಮ ಪ್ರದರ್ಶನದಲ್ಲಿ ಶ್ರೀ ದೇವಿಯ ಪಾತ್ರದಲ್ಲಿ ಪಾಣಾಜೆ ಗಣಪತಿ ಭಟ್ಟರು ಕಾಣಿಸಿಕೊಂಡಿದ್ದರು. ಬಣ್ಣದ ವೇಷಧಾರಿ ಬಣ್ಣದ ಕುಂಜ಼ಿ ಮಹಿಷಾಸುರನ ಪಾತ್ರವನ್ನು ನಿರ್ವಹಿಸಿದ್ದರು.***

## ಸಂಪಾದಕೀಯ

ಶುಭಕೃತ್ ಸಂವತ್ಸರದ ಯುಗಾದಿಯ ಶುಭಾಶಯಗಳು

ಪ್ರಿಯ ಓದುಗರೆ,



ಅಜಿತ್ ಕಾರಂತ್
ಗೌರವ ಸಂಪಾದಕರು

ಯಕ್ಷಗಾನ ಎಂದೊಡನೇ ಕಲಾಭಿಮಾನಿಗಳಲ್ಲಿ ಅದೇನೋ ಸಂಚಲನ! ಇದಕ್ಕೆ ಕಾರಣ ಈ ಕಲೆಯ ಒಳಗೆ ಹುದುಗಿರುವ ಹತ್ತು–ಹಲವು ವೈಶಿಷ್ಟ್ಯಗಳು. ಇಲ್ಲಿ ನೇತ್ರಾನಂದಕರ ವೇಷಭೂಷಣಗಳೂ, ನರ್ತನ–ಅಭಿನಯಗಳಿವೆ. ಕರ್ಣಾನಂದಕರ ಗಾಯನವಿದೆ, ಅರ್ಥವಿಲಾಸವಿದೆ. ಬುದ್ಧಿಯ ಪ್ರಚೋದನೆಗೆ ಬೇಕಾದ ವಿಷಯಮಂಡನೆಯಿದೆ. ಹೀಗೆ ಅಂಗೋಪಾಂಗಗಳಿಂದ ರಂಗದಲ್ಲಿ ವಿಜೃಂಭಿಸುತ್ತಾ, ಪಂಡಿತ–ಪಾಮರ ವರ್ಗದವರನ್ನೂ ರಂಜಿಸಿ, ಪುರಾಣ–ಇತಿಹಾಸಗಳ ಆದರ್ಶಗಳನ್ನು ಚಿತ್ತಭಿತ್ತಿಯಲ್ಲಿ ಅಚ್ಚೊತ್ತುವ ಪಾರಂಪರಿಕ ಸಂಸ್ಕಾರಕಲೆಯಿದು. ಕೇವಲ ಕರಾವಳಿ ಮಲೆನಾಡಿನ ಸೀಮೆಗಳಿಗೆ ಮಾತ್ರ ಸೀಮಿತಗೊಳ್ಳದೇ, ರಾಜ್ಯಾದ್ಯಂತ ಪಸರಿಸಿ, ರಾಷ್ಟ್ರಮಟ್ಟದಲ್ಲಿ ಗುರುತಿಸಿಕೊಂಡು, ವಿದೇಶಗಳಲ್ಲೂ ಮನ್ನಣೆಗೆ ಸೂಕ್ತವಾದ ಕಲೆಯಿದು. ಈ ಯಕ್ಷಗಾನ ದೇಸೀಯ ಸೊಗಡಿನೊಂದಿಗೆ ಶಾಸ್ತ್ರೀಯ ಸ್ಥಾನಮಾನ ಪಡೆವತ್ತ ಧಾಪುಗಾಲಿಡಲಾರಂಭಿಸಿದೆ. ಇದಕ್ಕೆ ಕಾರಣವಾಗಿ, ಪೂರಕ, ಪ್ರೇರಕ ಶಕ್ತಿಗಳಾಗಿ ನಾವು ಪ್ರಧಾನವಾದ ನಾಲ್ಕು ಕೇಂದ್ರಗಳನ್ನು ಗುರುತಿಸಬಹುದು.ಅವುಗಳು; ಯಕ್ಷಕವಿಗಳು, ಕಲಾವಿದರು, ವಿದ್ವಾಂಸರು ಹಾಗೂ ಪ್ರೇಕ್ಷಕರು. ತನ್ನ ಕವಿತಾಶಕ್ತಿಯನ್ನು ಧಾರೆಯೆರೆದು ಓರ್ವ ಯಕ್ಷಕವಿ ಪ್ರಸಂಗವೊಂದನ್ನು ರಚಿಸಿದರೆ, ತಮ್ಮ ಪರಿಶ್ರಮ, ಅಧ್ಯಯನಗಳ ಮೂಲಕ ಕಲಾವಿದರು ಸಾಂಘಿಕವಾಗಿ ಅದಕ್ಕೆ ಜೀವಕಳೆ ತರುತ್ತಾರೆ. ಯಕ್ಷವಿದ್ವಾಂಸರು ತಮ್ಮ ಅಧ್ಯಯನ ಕ್ರಿಯಾಶೀಲತೆಯೊಂದಿಗೆ ಈ ಕೃತಿಯ ವಿವಿಧ ಮಜಲುಗಳನ್ನು ವಿವರಿಸುತ್ತಾ, ರಂಗಪ್ರಯೋಗದ ಕುಂದನ್ನೂ, ಚಂದವನ್ನೂ ಎರಡನ್ನೂ ವಿಮರ್ಶಿಸಿ ಈ ಸಾಹಿತ್ಯ ಉಳಿಯುವಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತಾರೆ. ಈ ಮೂರೂ ಅಂಗಗಳ ಪರಿಪೂರ್ಣ ಪ್ರಯೋಜನವನ್ನು ಪ್ರೇಕ್ಷಕ ಪಡೆಯುತ್ತಾನೆ. ಜೊತೆಗೆ ತಾನು ಇದನ್ನು ಪೋಷಿಸಿ, ಪ್ರೋತ್ಸಾಹಿಸಿ ಸಹಕರಿಸುತ್ತಾನೆ. ಹೀಗೆ ಸಾಗುತ್ತದೆ ಈ ಚತುರ್ವರ್ಗಗಳ ಸಮ್ಮಿಲನ. ಇದು ಹೀಗೆಯೇ ಸಾಗಬೇಕು. ಇಲ್ಲಿ ತೊಡಕೆಂದರೆ, ಕಲಾವಿದರಿಗೂ, ಪ್ರೇಕ್ಷಕನಿಗೂ ನಿರಂತರ ಸಂಪರ್ಕವಿದೆ! ಆದರೆ ವಿದ್ವಾಂಸರಿಗೂ, ಕಲಾವಿದರಿಗೂ, ಹಾಗೂ ಕಲಾವಿದರಿಗೂ ಕವಿಗೂ ಸಂಪರ್ಕದ ಕೊರತೆ ಹಲವು ಕಡೆಗಳಲ್ಲಿ ಕಾಣಸಿಗುತ್ತದೆ. ಬಹುತೇಕ ಮಂದಿ ಕಲಾವಿದರು, ವಿದ್ವಾಂಸರಿರುವುದೇ ಕುಂದನ್ನು ಹೇಳುವುದಕ್ಕೆ ಎಂದು ತಿಳಿದಂತಿದೆ. (ಇದನ್ನು ಪ್ರಾತ್ಯಕ್ಷಿಕೆ, ಕಮ್ಮಟ ಇತ್ಯಾದಿ ಕಾರ್ಯಕ್ರಮಗಳ ಮೂಲಕ ತಿಳಿಯಲಾಗಿದೆ). ಆದರೆ, ಹೀಗಲ್ಲ! ಕಲೆಯೊಂದು ನಿತ್ಯಹರಿವಿನೊಂದಿಗೆ ಅರಿವನ್ನೂ ಉಳಿಸಿಕೊಳ್ಳುವುದು ಅಪೇಕ್ಷಣೀಯ. ಈ ನಿಟ್ಟಿನಲ್ಲಿ ಈ ನಾಲ್ಕು ವರ್ಗದವರ ನಡುವಿನ ಸೇತುವಾಗಿ ವ್ಯವಹರಿಸುವ ಅವಕಾಶ ಈ ಪತ್ರಿಕೆಯ ಮೂಲಕ ನಮಗೊದಗಿದ್ದಕ್ಕೆ ಹರ್ಷವಾಗುತ್ತಿದೆ. ನಾದನೂಪುರ ವಂಡಾರು ಡಿಜಿಪತ್ರಿಕೆ ಇದು ನಿತ್ಯ ಕ್ರಿಯಾಶೀಲತೆಯನ್ನೇ ರೂಢಿಸಿಕೊಂಡು, ನವನವೀನ ಚಿಂತನೆಗಳಿಗೆ ಸಾಕಾರಕೊಡುವ ಯುವಪ್ರಸಂಗಕರ್ತ ಸೌ। ಶುಭಾಶಯ ಜೈನ್ ಇವರ ಕಲ್ಪನೆಯ ಕೂಸು! ಈ ಕೂಸಿಗೆ ತೊಟ್ಟಿಲೊದಗಿಸಿದವರು ವಂಡಾರು ನಾದನೂಪುರ ಟ್ರಸ್ಟ್ ಇವರು. ಈ ತೊಟ್ಟಿಲಶಿಶುವನ್ನು ತೂಗುವ, ಬೆಳೆಸುವ ಹೊಣೆಗಾರಿಕೆ ಓದುಗರಾದ ನಿಮ್ಮದ್ದು! ಅನೇಕ ವಿದ್ವಜ್ಜನರ ಲೇಖನಗಳೊಂದಿಗೆ ನಿಮ್ಮ ಮೊಬೈಲ್ ಸೇರಲಿರುವ ಈ ಪತ್ರಿಕೆ ಯಕ್ಷಗಾನಕಲೆಯ ವಿವಿಧ ಮಜಲುಗಳನ್ನು ತೋರಲಿದೆ. ಇಲ್ಲಿ ಇನ್ನು ಒಂದು ಹೇಳಲೇಬೇಕಾದ ಅಂಶವೆಂದರೆ, ಯಕ್ಷಗಾನದ ಪತ್ರಿಕೆಯಲ್ಲವಾ!? ಅದರಲ್ಲಿ ಓದುವಂತಾದ್ದು ಏನಿದೆ!? ಹೀಗೆ ಹುಬ್ಬೇರಿಸುವವರನೇಕ. ಕಲಾವಿದರಲ್ಲಿ ಶೇಕಡಾ 10 ರಷ್ಟು ಓದಿದರೇ ಅದೇ ಹೆಚ್ಚು!! ದಯವಿಟ್ಟು ಹಾಗೆ ಯೋಚಿಸದೇ, ಇಂತಹಾ ಪತ್ರಿಕೆಗಳನ್ನು ಓದಿ, ನೀವು ಓದಿದ್ದನ್ನು ಬೇರೆಯವರಿಗೂ ಹೇಳಿ. ಕಾರಣವಿಷ್ಟೇ..... ಇದರಲ್ಲಿ ಯಕ್ಷಗಾನದ ಪರಂಪರೆಯಿದೆ, ಕಲಾವಿದರ ನೋವು–ನಲಿವುಗಳಿವೆ, ಸಾಹಿತ್ಯಾವಲೋಕನವಿದೆ, ರಸಭಾವಗಳ ಅನಾವರಣವಿದೆ... ಇನ್ನೂ ಏನೇನೋ..... ನಮ್ಮಲ್ಲಿ ಬರೆಯುವ, ಬರೆದದ್ದನ್ನು ಬುದ್ಧಿಗೆ ಒರೆಹಚ್ಚುವ, ಓರೆ–ಕೋರೆಗಳನ್ನು ನೇರವಾಗಿ ಹೇಳುವ ಪ್ರವೃತ್ತಿ ದೂರವಾದಂತಿದೆ. ಮುಖಕ್ಕೆ ಸರಿಯಾಗಿ ಮಾತಾಡಿ, ನಿಜವಾದ ವಿಷಯವನ್ನು ಹುದುಗಿಸಿಡುವ ಅಭ್ಯಾಸವಾಗಿದೆ. ಆದರೆ ಇಲ್ಲಿ ಬರೆಯಲ್ಪಡುವ ವಿಚಾರಗಳು ವಸ್ತುನಿಷ್ಠವಾಗಿರುತ್ತವೆ. ಕರ್ನಾಟಕ ಘನಸರ್ಕಾರದ ಯಕ್ಷಗಾನ ಅಕಾಡೆಮಿಯು ಯಕ್ಷಗಾನ ಸಮ್ಮೇಳನದಂತಹಾ ಕಾರ್ಯಕ್ಕೆ ಮುಂದಾಗಿರುವುದು ನಿಜಕ್ಕೂ ಶ್ಲಾಘನೀಯ. ಇದಕ್ಕೆ ಅಕಾಡೆಮಿಯ ಅಧ್ಯಕ್ಷರೂ ಹಾಗೂ ಸರ್ವಸದಸ್ಯರನ್ನೂ ಅಭಿನಂದಿಸುತ್ತಾ ಯುಗಾದಿಯ ಶುಭಾವಸರದಲ್ಲಿ ನಿಮ್ಮ ಕೈಗಿಡುವ ಈ ಪತ್ರಿಕೆಯನ್ನು ಓದಿ, ವಿಮರ್ಶಿಸಿ, ನೀವೂ ಬರೆಯುವ ಮೂಲಕ ನಮ್ಮೊಂದಿಗೆ ಕೈಜೋಡಿಸಿ ಎಂದು ಮನವಿ ಮಾಡುತ್ತಾ...

ಮತ್ತೊಮ್ಮೆ ಎಲ್ಲರಿಗೂ ಯುಗಾದಿಯ ಶುಭಾಶಯಗಳು.

ಸರ್ವೇ ಭದ್ರಾಣಿ ಪಶ್ಯಂತು ಮಾ ಕಶ್ಚಿತ್ ದುಃಖಭಾಗ್ಭವೇತ್ ॥

## ಕೊರೋನಾದಿಂದಾಗಿ ಮುಂಬೈ, ಕೊಲ್ಲಿ ರಾಷ್ಟ್ರಗಳಲ್ಲಿ ಸ್ಥಗಿತಗೊಂಡ ಯಕ್ಷಗಾನ ಪ್ರದರ್ಶನ ಮಗದೊಮ್ಮೆ ವಿಜೃಂಭಿಸಬಹುದೇ?

**ಲೇಖಕರ ಪರಿಚಯ**



ಎಂ ಶಾಂತಾರಾಮ ಕುಡ್ವ

ಬಿಕಾಂ ಪದವೀಧರರಾದ ಎಂ ಶಾಂತಾರಾಮ ಕುಡ್ವರು ಯಶಸ್ವಿ ಯಕ್ಷಗಾನ ಸಂಘಟಕರು. ಹವ್ಯಾಸಿ ಬರಹಗಾರರು, ಅನುಭವಿ ಯಕ್ಷಗಾನ ವಿಮರ್ಶಕರು ಹಾಗು ಹವ್ಯಾಸಿ ಕಲಾವಿದರು. ಯಕ್ಷ ಸಂಗಮದ ಸಂಚಾಲಕರಾಗಿ ಹಿರಿಯ ಯಕ್ಷಗಾನ ಕಲಾವಿದರಿಗೆ ಸನ್ಮಾನ ಹಾಗು ತಾಳಮದ್ದಳೆ ಕೂಟ ʼಡೆಸಿಕೊಂಡು ಬರುತ್ತಿದ್ದಾರೆ. ಮೂಡುಬಿದಿರೆ ಯಕ್ಷೋಪಾಸನಂ ನ ಸ್ಥಾಪಕರು. ಯಕ್ಷಗಾನಕ್ಕೆ ಸಂಬಂಧಿಸಿದಂತೆ ಸಾವಿರಾರು ಕಲಾವಿದರ ಪರಿಚಯ ಲೇಖನ ವಿಮರ್ಶೆ, ಸಂದರ್ಶನ, ಅನುಭವ ಸಂಗ್ರಹಗಳು ರಾಜ್ಯದ ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

ಯಕ್ಷಗಾನವು ಸಾಗರವನ್ನು ದಾಟಿ ಅದೆಷ್ಟೋ ಕಾಲ ಸಂದಿವೆ. ವರ್ಷಂಪ್ರತಿ ನೂರಾರು ಯಕ್ಷಗಾನ ಕಲಾವಿದರು ವಿದೇಶಗಳಲ್ಲಿ ಯಕ್ಷಗಾನ ಪ್ರದರ್ಶನ ನೀಡಿ, ಮಳೆಗಾಲದಲ್ಲಿ ತಮ್ಮ ಆದಾಯ ಕಂಡುಕೊಂಡಿದ್ದು ಸಂತಸದ ವಿಷಯ. ಆದರೆ, ಕಳೆದ ಎರಡು ವರ್ಷಗಳಿಂದ ಮನುಕುಲಕ್ಕೇ ಮಾರಕವಾದ ಭೀಕರ ಕೊರೋನಾದಿಂದಾಗಿ ಯಕ್ಷಗಾನ ಕಲಾವಿದರು ಅಪಾರವಾಗಿ ನಲುಗಿದ್ದಾರ. ಸಾಮಾನ್ಯವಾಗಿ ಮಳೆಗಾಲದಲ್ಲಿ ಬೆಂಗಳೂರು, ಮುಂಬೈ ಹಾಗೂ ಕೊಲ್ಲಿ ರಾಷ್ಟ್ರಗಳಲ್ಲಿ ಜರುಗುತ್ತಿದ್ದ ಯಕ್ಷಗಾನ ಪ್ರದರ್ಶನ ಕೊರೋನಾದಿಂದಾಗಿ ಹಿನ್ನಡೆ ಕಂಡದ್ದು ವಾಸ್ತವಿಕ ವಿಚಾರ. ಕೊರೋನಾದ ಪರಿಣಾಮವಾಗಿ ಕಳೆದ ಎರಡು ವರ್ಷಗಳಿಂದ ಮುಂಬೈ, ಹೈದರಾಬಾದ್, ಪುಣೆ, ಕೊಲ್ಲಿ ರಾಷ್ಟ್ರಗಳಲ್ಲಿ ಯಕ್ಷಗಾನ ಪ್ರದರ್ಶನಗಳು ಸ್ಥಗಿತಗೊಂಡಿತ್ತು. ಇದರಿಂದಾಗಿ ಸಂಕಷ್ಟಗೊಳಗಾದವರು ಯಕ್ಷಗಾನವನ್ನೇ ನಂಬಿಕೊಂಡಿರುವ ಕಲಾವಿದರು. ಆದರೆ, ಕೊರೋನಾದ ಮೂರನೇ ಅಲೆಯೂ ಇದೀಗ ಶಮನಗೊಂಡಿರುವುದು ಯಕ್ಷಗಾನ ಕಲಾವಿದರಿಗೆ ನೆಮ್ಮದಿಯ ಉಸಿರು ಬಿಡುವಂತಾಗಿದೆ. ಈ ವರ್ಷದ ಮಳೆಗಾಲದ ಅವಧಿಯಲ್ಲಿ ಯಕ್ಷಗಾನವು ಸಾಗರವನ್ನು ದಾಟುವ ನಿರೀಕ್ಷೆ ಇರುವುದು ಸುಳ್ಳಲ್ಲ. ದುಬೈನಲ್ಲಿ ಉದ್ಯಮಿಯಾಗಿರುವ, ಯಕ್ಷಗಾನ ಪೋಷಕ ಹಾಗೂ ಸಂಘಟಕರಾದ ಪದ್ಮರಾಜ ಎಕ್ಕಾರ್ ರವರು ಯಕ್ಷಗಾನದ ತಂಡವನ್ನು ದುಬೈಗೆ ಕರೆಸಿಕೊಂಡು ಯಕ್ಷಗಾನವನ್ನು ದುಬೈನಲ್ಲೂ ಹಮ್ಮಿಕೊಳ್ಳುತ್ತಿರುವವರು. 2019 ರಲ್ಲಿ ಬಡಗು ತಿಟ್ಟಿನ ಕಲಾವಿದರನ್ನು ದುಬೈಗೆ ಕರೆಸಿ ಉತ್ತಮ ಪ್ರದರ್ಶನ ನೀಡಿದ್ದರು.  ಕಲಾವಿದರ ಜೋಡಣೆಯ ಕಾರ್ಯವನ್ನು ನಾನೇ ಮಾಡಿದ್ದೆ. 2020 ರಲ್ಲಿ ತೆಂಕುತಿಟ್ಟಿನ ಕಲಾವಿದರನ್ನು ದುಬೈಗೆ ಕರೆಸುವ ಯೋಜನೆಯೂ ಇತ್ತಾದರೂ, ಕೊರೋನಾದಿಂದಾಗಿ ಆಗಲಿಲ್ಲ. ಆದರೆ, ಈ ವರ್ಷದ ಮಳೆಗಾಲದಲ್ಲಿ ಯಕ್ಷಗಾನ ತಂಡವನ್ನು ದುಬೈಗೆ ಕರೆಸುವ ಹಂಬಲ ಹೊಂದಿರುವುದಾಗಿ ಪದ್ಮರಾಜ ಎಕ್ಕಾರ್ ರವರು ಮೊನ್ನೆ ತಾನೇ ನನ್ನಲ್ಲಿ ತಿಳಿಸಿದ್ದರು. ದುಬೈ ಮಾತ್ರವಲ್ಲದೇ, ಬಹ್ರೇನ್ ಅಮೇರಿಕಾದಂತಹ ವಿದೇಶಗಳಲ್ಲೂ ಈ ವರ್ಷ ಯಕ್ಷಗಾನ ಪ್ರದರ್ಶನ ನೀಡುವ ಬಗ್ಗೆ ಅಲ್ಲಿಯ ಸಂಘಟಕರು ಮನ ಮಾಡಿರುವುದು ಸ್ವಾಗತಾರ್ಹ ಬೆಳವಣಿಗೆ. ಯಕ್ಷಗಾನವು ಈ ಬಾರಿ ಮಗದೊಮ್ಮೆ ವಿದೇಶಗಳಲ್ಲಿ ತನ್ನ ಕಂಪು ಬೀರಲಿದೆ.

ದುಬೈನ ಶೇಖರ್ ಶೆಟ್ಟಿಗಾರರ ನೇತ್ರತ್ವದ "ಯಕ್ಷಮಿತ್ರರು" ಕಳೆದ ಹಲವಾರು ವರ್ಷಗಳಿಂದ ತಮ್ಮ ವಾರ್ಷಿಕೋತ್ಸವ ಆಚರಣೆಯ ಸಂದರ್ಭದಲ್ಲಿ ಸುಪ್ರಸಿದ್ಧ ಕಲಾವಿದರನ್ನು ದುಬೈಗೆ ಕರೆಸಿ ಪ್ರದರ್ಶನ ನೀಡುತ್ತಿದ್ದು, ಇತ್ತೀಚಿಗೆ ಕೊರೋನಾದಿಂದಾಗಿ ಸ್ಥಗಿತಗೊಂಡಿತ್ತು. ಆದರೆ, ಈ ವರ್ಷ ಯಕ್ಷಗಾನ ಕಲಾವಿದರನ್ನು ದುಬೈಗೆ ಬರಮಾಡಿಕೊಳ್ಳುವ ನಿರೀಕ್ಷೆಯಿದೆ. ಬಹ್ರೇನ್



ನಲ್ಲೂ ಯಕ್ಷಗಾನ ಸಂಘವಿದ್ದು, ರಾಮಪ್ರಸಾದ್ ಅಮ್ಮೆನಡ್ಕ, ದೀಪಕ್ ಪೇಜಾವರರಂತಹ ಸಂಘಟಕರೂ ಈ ಬಾರಿ ದಕ್ಷಿಣ ಕನ್ನಡ ಜಿಲ್ಲೆಯ ಯಕ್ಷಗಾನ ಕಲಾವಿದರಿಗೆ ಅವಕಾಶ ನೀಡುವ ನಿರೀಕ್ಷೆಯಿದೆ. ಯಕ್ಷಧ್ರುವ ಪಟ್ಲ ಫೌಂಡೇಶನ್ ವತಿಯಿಂದ ಅಮೇರಿಕಾದಂತಹ ರಾಷ್ಟ್ರಗಳಲ್ಲಿ ಪ್ರದರ್ಶನ ನೀಡುತ್ತಿದ್ದು, ಈ ಬಾರಿ ಮಗದೊಮ್ಮೆ ಬೇಡಿಕೆಯಿರುವುದು ಗಮನಾರ್ಹ. ಕರ್ನಾಟಕದ ರಾಜಧಾನಿ ಬೆಂಗಳೂರು ಮಳೆಗಾಲದಲ್ಲಿ ಯಕ್ಷಗಾನಕ್ಕೆ ಪ್ರೋತ್ಸಾಹ ನೀಡುವ ಕೇಂದ್ರ. ಮಳೆಗಾಲದಲ್ಲಿ ದಕ್ಷಿಣೋತ್ತರ ಕನ್ನಡ ನಾಡಿನ ಕಲಾವಿದರಿಂದ 50 ಕ್ಕೂ ಹೆಚ್ಚು ಪ್ರದರ್ಶನ ನೀಡುವ ಸಂಪ್ರದಾಯ ಈ ವರ್ಷ ಮರುಕಳಿಸುವ ಎಲ್ಲಾ ಸಾಧ್ಯತೆಗಳಿವೆ. ಬೆಂಗಳೂರಿನಲ್ಲಿ ಡಾ. ಶಿವಕುಮಾರ್ ಬೇಗಾರ್, ಅರ್ಜುನ್ ಕೊರ್ಡೇಲ್, ಪ್ರಸಾದ್ ಚೇರ್ಕಾಡಿ, ಪವನ್ ಕೆರ್ವಾಶೆ, ನಾಗಶ್ರೀ ಮುಂತಾದವರ ಯಕ್ಷಗಾನ ತಂಡಗಳು ಈ ವರ್ಷ ಸಕ್ರಿಯರಾಗಿ ತೊಡಗಿಸಿಕೊಳ್ಳುವ ಸಾಧ್ಯತೆಗಳಿವೆ. ಸುಮಾರು ಎರಡು ದಶಕಗಳ ಹಿಂದೆ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಯಕ್ಷಗಾನ ಟೆಂಟ್ ಮೇಳಗಳು ಮುಂಬೈನಲ್ಲಿ ಮಳೆಗಾಲದಲ್ಲಿ ಪೈಪೋಟಿಯ ಪ್ರದರ್ಶನ ನೀಡುತ್ತಿದ್ದು, ಇತ್ತೀಚೆಗೆ ಟೆಂಟ್ ಮೇಳಗಳು ನೇಪಥ್ಯಕ್ಕೆ ಸರಿದ ಕಾರಣ, ಖಾಸಗೀ ಯಕ್ಷಗಾನ ತಂಡಗಳು ಪ್ರದರ್ಶನ ನೀಡುತ್ತಿದ್ದವು. ಅದರೊಂದಿಗೆ ಮುಂಬಯಿನ ಸಂಘಟಕರು ದಕ್ಷಿಣ ಕನ್ನಡ ಜಿಲ್ಲೆಯ ಆಯ್ದ ಸುಪ್ರಸಿದ್ಧ ಯಕ್ಷಗಾನ ಕಲಾವಿದರನ್ನು ಆಹ್ವಾನಿಸಿ ಯಕ್ಷಗಾನ ಪ್ರದರ್ಶನ ನೀಡುವ ಪರಿಪಾಟವಿತ್ತು .ದುಬೈನ ಉದ್ಯಮಿ ಪದ್ಮನಾಭ ಕಟೀಲುರವರು ಕಳೆದ ಕೆಲವು ವರ್ಷಗಳಿಂದ ದಿ.ಗೋಪಾಲಕೃಷ್ಣ ಅಸ್ರಣ್ಣ ಸಂಸ್ಮರಣೆಯ ಅಂಗವಾಗಿ ಮುಂಬೈನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಸುಪ್ರಸಿದ್ಧ ಕಲಾವಿದರ ಸಂಯೋಜನೆಯೊಂದಿಗೆ ಅದ್ದೂರಿಯ ಯಕ್ಷಗಾನ ಪ್ರದರ್ಶನ ಏರ್ಪಡಿಸುತ್ತಿದ್ದರು. ಈ ವರ್ಷವೂ ಪ್ರದರ್ಶನ ನೀಡುವ ಸಂಭವವಿದೆ. ಅಜೆಕಾರು ಬಾಲಕೃಷ್ಣ ಶೆಟ್ಟರ ನೇತೃತ್ವದ ಅಜೆಕಾರು ಕಲಾಭಿಮಾನಿ ಬಳಗ ಮುಂಬಯಿನ ಮಳೆಗಾಲದ ಅದ್ದೂರಿಯ ತಾಳಮದ್ದಳೆ ಕೂಟವು ಈ ಬಾರಿ ಮರುಕಳಿಸುವ ನಿರೀಕ್ಷೆಯಿದೆ. ಕೊರೋನಾದಿಂದಾಗಿ ಕಡಿದು ಹೋದ ಈ ನಂಟು ಈ ವರ್ಷದ ಮಳೆಗಾಲದಲ್ಲಿ ಮಗದೊಮ್ಮೆ ವಿಜೃಂಭಿಸುವ ಲಕ್ಷಣ ಗೋಚರಿಸುತ್ತಿದೆ. ಕೊರೋನಾ ಪಾಸಿಟಿವಿಟಿ ರೇಟ್ ಇದೀಗ ಕಮ್ಮಿಯಾಗಿದೆ ಹಾಗೂ ಕೊರೋನಾದಿಂದಾಗಿ ಹಳಿ ತಪ್ಪಿದ್ದ ಆರ್ಥಿಕ ಸ್ಥಿತಿಯೂ ಸದ್ಯಕ್ಕೆ ಸುಧಾರಿಸಿದೆ. ಹಾಗಾಗಿ ದಕ್ಷಿಣ ಕನ್ನಡ ಜಿಲ್ಲೆಯ ಹೊರಗೆ, ಮುಂಬೈ ಹಾಗೂ ವಿದೇಶಗಳಲ್ಲಿ ಯಕ್ಷಗಾನವು ತನ್ನ ಹಿಂದಿನ ವೈಭವ ಪಡೆಯಲಿದೆ ಎಂಬುದು ಯಕ್ಷಗಾನ ಅಭಿಮಾನಿಗಳಿಗೆ ಸಂತಸ ತರುವ ಸಂಗತಿಯಾಗಿದೆ.

## ಫಣಿಗಿರಿ ಪ್ರತಿಷ್ಠಾನವು ಹೊರತಂದ ಎರಡು ಪ್ರಸಂಗಗಳ ಸುತ್ತ..



ರವಿ ಮಡೋಡಿ


**ಲೇಖಕರ ಪರಿಚಯ** – *ಲೇಖಕ ರವಿ ಮಡೋಡಿ, ಪ್ರಸ್ತುತ ಬೆಂಗಳೂರಿನಲ್ಲಿ, ಮಾಹಿತಿ ತಂತ್ರಜ್ಞಾನ ಉದ್ಯೋಗಿಯಾಗಿದ್ದು, ಹವ್ಯಾಸಿ ಯಕ್ಷಗಾನ ಕಲಾವಿದರೂ ಹೌದು. ಮೂಲತಹ ಇವರು ಉಡುಪಿ ಜಿಲ್ಲೆಯ ಶಿರೂರು ತಾಲೂಕಿನವರು. ಇವರು ಮಲೆನಾಡಿನ ಯಕ್ಷ ಸಾಧಕರನ್ನು ಪರಿಚಯಿಸುವ ಮಲೆನಾಡಿನ ಯಕ್ಷ ಚೇತನಗಳು ಎಂಬ ಪುಸ್ತಕವನ್ನು ಬರೆದಿದ್ದಾರೆ*

ಇತ್ತೀಚೆಗೆ ಶಿರೂರು ಫಣಿಯಪ್ಪಯ್ಯನವರು ರಚಿಸಿರುವ ವಾಜಿಗ್ರಹಣ ಅಥವಾ ಯೌವನಾಶ್ವನ ಕಾಳಗ ಹಾಗೂ ಅವರ ತಾಡವಾಲೆ ಸಂಗ್ರಹದ ಮೂಲ್ಕಿ ವೆಂಕಣ್ಣಕವಿಯ ಮಾನಸ ಚರಿತ್ರೆ ಪ್ರಸಂಗಗಳನ್ನು ಫಣಿಗಿರಿ ಪ್ರತಿಷ್ಠಾನವು ಪುಸ್ತಕ ರೂಪದಿಂದ ಹೊರತಂದಿದೆ. ಆ ಕೃತಿಗಳ ಬಗ್ಗೆ ಒಂದಷ್ಟು ವಿಚಾರಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತಿರುವೆ

**ಕವಿ ಪರಿಚಯ–ಶಿರೂರು ಫಣಿಯಪ್ಪಯ್ಯ (1918– 2004)**

ಯಕ್ಷಗಾನ ಪ್ರಪಂಚದಲ್ಲಿ ಅದೆಷ್ಟು ಮಂದಿ ಯಾವುದೇ ಫಲಾಪೇಕ್ಷೆಯನ್ನು ಹೊಂದದೆ ಕೇವಲ ಸ್ವಂತ ಸುಖಾಯಕ್ಕಾಗಿ ದುಡಿಮೆಯನ್ನ ಮಾಡಿದವರಿದ್ದಾರೆ/ಮಾಡುತ್ತಿದ್ದಾರೆ. ಇಂತವರ ಅವಿರತವಾದ, ಅನನ್ಯವಾದ ಸೇವೆ ಪರಿಶ್ರಮಗಳು ಯಕ್ಷಗಾನವನ್ನು ಬಹಳಷ್ಟು ಎತ್ತರಕ್ಕೆ ಕೊಂಡೊಯ್ದಿದೆ ಎಂದರೆ ತಪ್ಪಾಗಲಾರದು. ಅಂತಹ ಸಾಧಕರಲ್ಲಿ ಪಟ್ಟಿಯಲ್ಲಿ ಶ್ರೀ ಶಿರೂರು ಫಣಿಯಪ್ಪಯ್ಯ ಅವರು ಕೂಡ ಒಬ್ಬರು. ಉಡುಪಿ ಜಿಲ್ಲೆಯ ಬೈಂದೂರು ತಾಲೂಕಿನಲ್ಲಿ ಹುಟ್ಟಿದ ಫಣಿಯಪ್ಪಯ್ಯನವರದ್ದು ಬಹುಮುಖ ವ್ಯಕ್ತಿತ್ವ. ಒಂದು ಕ್ಷೇತ್ರದಲ್ಲಿ ತಮ್ಮನ್ನ ಗುರುತಿಸಿಕೊಳ್ಳದೇ ಹಲವು ಕ್ಷೇತ್ರದಲ್ಲಿ ಕಾಣಿಸಿಕೊಂಡು, ಎಲ್ಲಡೆಯಲ್ಲಿ ಯಶಸ್ವಿಯಾಗಿದ್ದಾರೆ. ಭಾಗವತರಾಗಿ, ಪ್ರಸಂಗಕರ್ತರಾಗಿ, ಮೇಳದ ವ್ಯವಸ್ಥಾಪಕರಾಗಿ, ಯಕ್ಷಗಾನ ತಾಡವಾಲೆಗಳ ಸಂಗ್ರಹಕಾರರಾಗಿ, ಹಿಮ್ಮೇಳ ಪರಿಕರಿಗಳ ತಂತ್ರಜ್ಞರಾಗಿ ಸರಿ ಸುಮಾರು 50 ವರುಷಗಳ ಕಾಲ ನಿರಂತರವಾಗಿ ಯಕ್ಷಗಾನ ರಂಗದಲ್ಲಿ ತಮ್ಮ ಸೇವೆಯನ್ನು ಮಾಡಿದ್ದಾರೆ. ಹದಿನೈದಕ್ಕೂ ಹೆಚ್ಚು ಯಕ್ಷಗಾನ ಪ್ರಸಂಗ ಕೃತಿಗಳು ಅವರಿಂದ ಒಡಮೂಡಿರುವುದು ಸಹ ಗಮನಿಸಬೇಕಾದ ಅಂಶ. ಮಹೇಂದ್ರ ವಿಜಯ, ಕೃಷ್ಣ ಗಾರುಡಿ, ನಹುಷೋದ್ಭವ, ಮದಾಲಸಾ ಪರಿಣಯ, ವಾಜಿಗ್ರಹಣ, ಸಗರಾಶ್ವಮೇಧ, ಅಮೃತಾಪಹರಣ, ಶ್ವೇತ ಚಂದ್ರಿಕಾ, ವೀರವರ್ಮ ಕಾಳಗ, ನೀಲಧ್ವಜ ಕಾಳಗ ಇತ್ಯಾದಿಗಳು ಅವರ ಪ್ರಮುಖ ಪ್ರಸಂಗಗಳಾಗಿವೆ. ಮೇಳದ ಭಾಗವತರಾಗಿ ಹಲವು ಮೇಳದಲ್ಲಿ ಕಾಣಿಸಿಕೊಂಡು ದಿಗ್ಗಜ ಕಲಾವಿದರನ್ನು ಕುಣಿಸಿದ ಖ್ಯಾತಿ ಅವರದ್ದು. ಜೊತೆಗೆ ಕೆರೆಮನೆ(1962–1963) ಹಾಗೂ ಕೊಲ್ಲೂರು(1955–1962) ಮೇಳಗಳ ವ್ಯವಸ್ಥಾಪಕರಾಗಿಯೂ ಕೂಡ ಸೇವೆಯನ್ನು ಸಲ್ಲಿಸಿದ್ದಾರೆ. ಹಳೆಯ ತಾಡವಾಲೆಗಳನ್ನು ಜತನದಿಂದ ಕಾಪಿಟ್ಟುಕೊಂಡು ನಾಶವಾಗದಂತೆ ಸಂಗ್ರಹಿಸಿ ಅದರ ಮೌಲ್ಯವನ್ನು ಅರಿತವರಾಗಿದ್ದರು. ಶಿವರಾಮ ಕಾರಂತರರ ಯಕ್ಷಗಾನ ಸಂಶೋಧನೆಗೆ ಅಮೂಲ್ಯ ಸಲಹೆ–ಸಹಕಾರವನ್ನು ಕೊಟ್ಟಿದ್ದಾರೆ. ಇಂತಹ ಸಾಧನೆಗೈದ ಫಣಿಯಪ್ಪಯ್ಯನವರ ಬಗ್ಗೆ, ಅವರ ಸಾಧನೆಯ ತಿಳಿಸುವ ಉಪ್ಪುಂದ ಚಂದ್ರಶೇಖರ ಹೊಳ್ಳರು ಪುಸ್ತಕ ರೂಪದಲ್ಲಿ 2002 ರಲ್ಲಿ ಹೊರತಂದಿದ್ದಾರೆ. ಇವರ ಸಾಧನೆಯನ್ನು ಗುರುತಿಸಿ 2001 ರಲ್ಲಿ ಕರ್ನಾಟಕ ಯಕ್ಷಗಾನ ಜಾನಪದ ಪ್ರಶಸ್ತಿ ಲಭಿಸಿದೆ. ಇಂದು ಅವರು ನಮ್ಮೊಂದಿಗೆ ಇಲ್ಲವಾದರು ಅವರ ಯಕ್ಷಗಾನದ ಸೇವೆ ಶಾಶ್ವತವಾಗಿ, ನೆನಪಿನಲ್ಲಿ ಉಳಿಯುವಂತೆ ಮಾಡಿದ್ದಾರೆ.

**ವಾಜಿಗ್ರಹಣ ಅಥವಾ ಯೌವನಾಶ್ವನ ಕಾಳಗ**




ಐದು ಸಾವಿರಕ್ಕೂ ಹೆಚ್ಚು ಪ್ರಸಂಗಗಳನ್ನು ಹೊಂದಿರುವ ಯಕ್ಷಗಾನದಲ್ಲಿ ಎರಡು ಸಾವಿರಕ್ಕೂ ಅಧಿಕ ಪ್ರಸಂಗಗಳು ಪುರಾಣ ಆಧಾರಿತ ಕೃತಿಗಳು ಎನ್ನುವುದು ವಿಶೇಷ. ಈ ಕೃತಿಗಳು ನಮ್ಮ ಸಂಸ್ಕೃತಿಯ ಅನೇಕ ಪುರಾಣಗಳನ್ನು, ಗ್ರಂಥಗಳನ್ನು ಆಧರಿಸಿ ರಚಿತವಾಗಿರುವುದನ್ನು ಕಾಣಬಹುದು. ಕನ್ನಡದ ಅದ್ವಿತಿಯ ಕೃತಿಗಳಲ್ಲಿ ಒಂದಾದ ಲಕ್ಷ್ಮೀಶನ ಲಕ್ಷ್ಮೀಶ ಭಾರತ ಕೃತಿಯನ್ನು ಆಧಾರವಾಗಿಟ್ಟುಕೊಂಡು ಯಕ್ಷಗಾನದಲ್ಲಿ ಹತ್ತಕ್ಕೂ ಹೆಚ್ಚು ಪ್ರಸಂಗಗಳು ರಚಿತವಾಗಿವೆ. ಇದರಲ್ಲಿ ಯೌವನಾಶ್ವ ಕಾಳಗ, ನೀಲಧ್ವಜನ ಕಾಳಗ, ತಾಮ್ರಧ್ವಜ, ಚಂದ್ರಹಾಸ ಚರಿತ್ರೆ, ಸುಧನ್ವ ಕಾಳಗ, ವೀರವರ್ಮ ಕಾಳಗ ಮುಂತಾದ ಕೃತಿಗಳು ಸೇರಿವೆ. ಯೌವನಾಶ್ವನ ಕಥೆಯನ್ನು ಆಧಾರವಾಗಿಟ್ಟುಕೊಂಡು ಜಾನಕೈ ತಿಮ್ಮಪ್ಪ ಹೆಗಡೆ, ಬಡೆಕ್ಕಿಲ ವೆಂಕಟರಮಣ ಭಟ್ಟ,ಕೆ., ವಿ. ಕೃಷ್ಣಪ್ಪ ಮುಂತಾದವರು ಯಕ್ಷಗಾನದಲ್ಲಿ ಕೃತಿಗಳನ್ನು ಬರೆದಿದ್ದಾರೆ. ಇದರಲ್ಲಿ ಶಿರೂರು ಫಣಿಯಪ್ಪಯ್ಯ ಕೂಡ ಒಬ್ಬರು.

ಕಥಾ ಸಾರಂಶ: ಮಹಾಭಾರತದ ಯುದ್ಧದ ನಂತರ ಧರ್ಮರಾಯನು ಹಸ್ತಿನಾವತಿಯಲ್ಲಿ ರಾಜ್ಯಭಾರವನ್ನು ಮಾಡುವ ಸಂದರ್ಭದಲ್ಲಿ ಬಂಧುಗಳನ್ನು ಗುರುಗಳನ್ನೂ ಕೊಂದು ಬಿಟ್ಟೆವೆಂಬ ನೋವು ಧರ್ಮರಾಜನನ್ನು ಕಾಡುತ್ತದೆ. ಇದರ ಶಂಕೆಯ ನಿವಾರಣೆಗೆ ವೇದವ್ಯಾಸರ ಸಲಹೆಯಂತೆ ಅಶ್ವಮೇಧಯಾಗವನ್ನು ಕೈಗೊಳ್ಳಲು ನಿರ್ಧರಿಸಿದ. ಅಶ್ವಮೇಧಕ್ಕಾಗಿ ಮರುತ್ತನ ಸಂಪತ್ತಿನ ವಿಷಯವನ್ನು ಹಾಗೂ ಭದ್ರಾವತಿ ನಗರದ ಯೌವನಾಶ್ವನಲ್ಲಿ ಯಜ್ಞಕ್ಕೆ ಅಗತ್ಯವಾದ ದಿವ್ಯಾಶ್ವವಿದೆ ಎಂಬುದನ್ನು ತಿಳಿದ. ಶ್ರೀ ಕೃಷ್ಣನ ಅನುಗ್ರಹವನ್ನು ಪಡೆದು ಭೀಮ, ವೃಷಕೇತು ಮುಂತಾದವರು ಸಂಪತ್ತನ್ನೂ ಕುದುರೆಯನ್ನೂ ತರುವುದಕ್ಕೆ ತೆರಳಿ ಯೌವನಾಶ್ವನ ಅಶ್ವವನ್ನು ಅಪಹಾರವನ್ನು ಮಾಡುತ್ತಾರೆ. ಕುದುರೆಯನ್ನು ಬಿಡಿಸಿಕೊಂಡು ಹೋಗಲು ಬಂದ ಯೌವನಾಶ್ವ ಸೈನ್ಯವನ್ನು ಮತ್ತು ಯೌವನಾಶ್ವನನ್ನು ವೃಷಕೇತು ಯುದ್ಧದಲ್ಲಿ ಸೋಲಿಸಿದ. ಕೊನೆಗೆ ಯೌವನಾಶ್ವ ಭೀಮನಿಗೆ ಶರಣಾದ. ಪಾಂಡವರು ನೆರವೇರಿಸಲಿರುವ ಯಜ್ಞಕಾರ್ಯದಲ್ಲಿ ತಾನೂ ನೆರವಾಗಲು ಎಲ್ಲರೊಡನೆ ಯೌವನಾಶ್ವ ಹಸ್ತಿನಾವತಿಗೆ ಬಂದ. ಕುದುರೆಯನ್ನು ಗೌರವದಿಂದ ಬರಮಾಡಿಕೊಂಡರು. ಉಳಿದೆಲ್ಲ ಸಿದ್ಧತೆಗಳೊಂದಿಗೆ ಯಜ್ಞ ಯಶಸ್ವಿಯಾಗಿ ಪರಿಸಮಾಪ್ತಿಗೊಂಡಿತೆನ್ನುವಲ್ಲಿಗೆ ಕಥೆಗೆ ಮಂಗಲವಾಗುತ್ತದೆ. ಯಕ್ಷಗಾನದಲ್ಲಿ ವೀರರಸಕ್ಕೆ ಹೆಚ್ಚು ಆದ್ಯತೆಗಳಿರುತ್ತದೆ. ಈ ರಸವು ಅಲ್ಲಿರುವ ವೇಷಭೂಷಣ, ಹಾಡುಗಾರಿಕೆ, ನರ್ತನ, ಚಂಡೆ–ಮದ್ದಲೆಗಳ ನಿನಾದಕ್ಕೆ ಹೊಂದಿಕೆಯಾಗುವ ಕಾರಣವು ಬಹುಮುಖ್ಯವಾಗಿದೆ. ಈ ಪ್ರಸಂಗವು ವೀರರಸವನ್ನು ಹೊಂದಿದ್ದರೂ ಉಳಿದ ರಸಕ್ಕೆ ಅವಕಾಶವಿರುವ ದೃಶ್ಯ ವೈವಿಧ್ಯತೆಗಳಿವೆ. ಉದಾಹರಣೆಗೆ ಯೌವನಾಶ್ವ ಹಾಗೂ ವೃಷಕೇತು ಯುದ್ಧದ ಸಂದರ್ಭದಲ್ಲಿ ವೀರರಸ ಹೆಚ್ಚು ಕಾಣಸಿದರೆ, ಕೃಷ್ಣ–ಸತ್ಯಭಾಮೆಯರ ಶೃಂಗಾರದ ಸನ್ನಿವೇಶಗಳನ್ನು ಕವಿಯು ಉದಾತ್ತವಾಗಿ ಚಿತ್ರಿಸಿದ್ದಾರೆ. ಪ್ರಸಂಗದಲ್ಲಿ ಮುಖ್ಯ ಪಾತ್ರವಾಗಿರುವ ಭೀಮನ ಪಾತ್ರವು ಶೌರ್ಯದ ಜೊತೆ ಜೊತೆಗೆ ಭಕ್ತಿ, ವ್ಯಾಕುಲತೆನ್ನು ಹೊಂದಿರುವುದು ಪಾತ್ರಕ್ಕೆ ಮತ್ತೊಂದು ಆಯಾಮವನ್ನು ನೀಡುತ್ತದೆ. ಹಾಸ್ಯ ರಸಕ್ಕಾಗಿ ಚಿಕ್ಕದಾದ ದೂತನ ಪಾತ್ರವಿದೆ. ಜೊತೆಗೆ ಯಕ್ಷಗಾನದ ಆಹಾರ್ಯಕ್ಕೆ ಹೊಂದಿಕೆಯಾಗುವ ವಿವಿಧ ವೇಷಗಳಿವೆ. ಕೃಷ್ಣ, ಸತ್ಯಭಾಮೆ, ಧರ್ಮರಾಯ, ದ್ರೌಪದಿ, ಯೌವನಾಶ್ವ, ಭೀಮ, ವೃಷಕೇತು ಪಾತ್ರಗಳು ಈ ಪ್ರಸಂಗದ ಪ್ರಮುಖ ಪಾತ್ರಗಳಾಗಿವೆ. ಒಟ್ಟಿನಲ್ಲಿ ಮೂರು ಗಂಟೆಯ ಆಖ್ಯಾನಕ್ಕೆ ಈ ಪ್ರಸಂಗವು ಸೂಕ್ತವಾಗಿದೆ. "ಕರುಣಸಾಗರಲಾಲಿಸು ಮದ್ವಚನವ ಹುರುಷದೊಳವಧರಿಸು", "ಮಾನಿನೀಮಣಿಯೆ ಕೇಳು ನಾ ಪೊರಟಿಯ" ಎಂಬ ಇತ್ಯಾದಿ ಪದ್ಯಗಳು ಗಾಯನ, ನರ್ತನ ಮತ್ತು ಅಭಿನಯಕ್ಕೆ ಹೆಚ್ಚು ಅವಕಾಶವನ್ನು ಕೊಡುತ್ತದೆ.

**ಮಾನಸ ಚರಿತ್ರೆ**

**ಕವಿ ಪರಿಚಯ–ಮೂಲ್ಕಿ ವೆಂಕಣ್ಣ (18ನೇ ಶತಮಾನ)**




18ನೇ ಶತಮಾನದಲ್ಲಿ ಕಂಡಬರುವ ಈ ಕವಿಯೂ ಮೂಲತಃ ಬಯಲುಸೀಮೆಯ ಬಂಕಾಪುರದವನು. ಸಂಸಾರದಲ್ಲಿ ವಿರಕ್ತಿಗೊಂಡು ಅಲ್ಲಿಂದ ಉಡುಪಿ ಬಳಿಯ ಮೂಲ್ಕಿಗೆ ಬರುತ್ತಾನೆ. ಕವಿಯು ಸಾಹಿತ್ಯ ಮತ್ತು ಸಂಗೀತದಲ್ಲಿ ಪ್ರತಿಭೆಯನ್ನು ಹೊಂದಿದ್ದು ಹಲವಾರು ಕೀರ್ತನೆಯನ್ನು ರಚಿಸಿದ್ದಾನೆ. ಜೊತೆಗೆ ಅನಂತವ್ರತ ಮತ್ತು ಮಾನಸ ಚರಿತ್ರೆ ಎಂಬ ಯಕ್ಷಗಾನ ಪ್ರಸಂಗಗಳನ್ನು ರಚಿಸಿದ್ದಾನೆ. ಯಕ್ಷಗಾನ ಪ್ರಸಂಗಗಳಲ್ಲಿ ಕೇವಲ ಪೌರಾಣಿಕ, ಸಾಮಾಜಿಕ, ಐತಿಹಾಸಿಕ ಪ್ರಸಂಗಗಳ ಜೊತೆಯಲ್ಲಿ ಆಧಾತ್ಮ ಚಿಂತ ನೆಯ ಪ್ರಸಂಗಳನ್ನು ರಚನೆಯಾಗಿರುದನ್ನು ಕಾಣಬಹುದು. ಇದು ಯಕ್ಷಗಾನ ಸಾಹಿತ್ಯವನ್ನು ಮತ್ತಷ್ಟು ಬೆಳೆಸುವುದಕ್ಕೆ ಕಾರಣವಾಗಿದೆ. ಇದಕ್ಕೆ ಉದಾಹರಣೆಯೆಂದರೆ ಕಿಬ್ಬಚ್ಚಲು ಮಂಜಮ್ಮ ವಿರಚಿತ ಜೀವ ಪರಮರ, ಮೂಲ್ಕಿ ವೆಂಕಣ್ಣಕವಿಯ ಮಾನಸ ಚರಿತ್ರೆ ಪ್ರಸಂಗಗಳು ಇತ್ಯಾದಿ. ಇದರಲ್ಲಿ 250 ವರುಷದ ಹಿಂದೆ ಮೂಲ್ಕಿ ವೆಂಕಣ್ಣ ಕವಿಯು ಮಾನಸ ಚರಿತ್ರೆ ಪ್ರಸಂಗವನ್ನು ರಚಿಸಿದ್ದರೂ ಅದು ಈವರೆಗೂ ಯಕ್ಷಗಾನ ಪ್ರಿಯರಿಗೆ ಅಲಭ್ಯವಾಗಿತ್ತು. ಅಂತಹ ಅಜ್ಞಾತವಾಗಿದ್ದ ಈ ಪ್ರಸಂಗವನ್ನು ಶಿರೂರು ಫಣಿಯಪ್ಪಯ್ಯನವರು ತಾಡವಾಲೆಯಲ್ಲಿ ಶತಮಾನಗಳಿಂದ ಸಂಗ್ರಹಿಸಿಟ್ಟಿದ್ದರು. ಈಗ ಫಣಿಗಿರಿ ಪ್ರತಿಷ್ಠಾನವು ಅದನ್ನು ಪುಸ್ತಕ ರೂಪದಿಂದ ತಂದಿರುವುದು ಶ್ಲಾಘನೀಯವಾಗಿದೆ. ಜೀವ ಪರಮರ ಕಲ್ಯಾಣ ಪ್ರಸಂಗವು ವೇದಾಂತ ವಿಷಯದ ಪ್ರಸಂಗದಲ್ಲಿ ಹಂಕರ, ಸುಖೇಚ್ಛೆ, ದುಷ್ಟಮತಿ, ಶಾಂತಮತಿ ಮುಂತಾದ ಪಾತ್ರಗಳನ್ನು ಗುಣ ದೋಷಗಳಿಗೆ ಮೂರ್ತರೂಪವನ್ನಾಗಿಸಿ ಪ್ರಸಂಗ ರಚನೆಯಾದರೆ ಮಾನಸ ಚರಿತ್ರೆ ಪ್ರಸಂಗದಲ್ಲಿ ಮನುಷ್ಯನ ಮನಸ್ಸಿನ ನಡೆಯುವ ಸಂಘರ್ಷವು ಇಲ್ಲಿಯ ಪ್ರಮುಖ ಕಥಾವಸ್ತುವಾಗಿದೆ. ಕಾಯಪಟ್ಟಣಕ್ಕೆ ಮನಸ್ಸೆಂಬ ರಾಜನಿದ್ದು ಆತನಿಗೆ ಪ್ರವೃತ್ತಿ ಮತ್ತು ನಿವೃತ್ತಿಯರೆಂಬ ಇಬ್ಬರೂ ರಾಣಿಯರು. ಅದರಲ್ಲಿ ಪ್ರವೃತ್ತಿಗೆ ಮೋಹ, ಕಾಮ, ಕ್ರೋಧ, ಮದ, ಮತ್ಸರಗಳೆಂಬ ಏಳು ಜನ ಗಂಡು ಮಕ್ಕಳಾದರೆ ಆಸೆ, ಕಲ್ಪನೆ, ತೃಷೆ, ಭ್ರಾಂತಿ, ಇಚ್ಛೆ, ವಾಸನೆಗಳೆಂಬ ಹೆಣ್ಣು ಮಕ್ಕಳು. ಹೀಗೆ ಮನಸ್ಸಿನ ಬೇರೆ ಬೇರೆ ಸ್ಥಿತಿಗಳನ್ನೇ ಕವಿಯು ಪಾತ್ರವಾಗಿಸಿ ಅಲ್ಲಿನ ತಳಮಳ, ಸಂಘರ್ಷ, ಸುಖ, ದುಃಖ ಮುಂತಾದ ಭಾವಗಳ ವೈರುಧ್ಯವನ್ನು ಚಿತ್ರಿಸಿ ವಿವೇಕ, ಜ್ಞಾನಗಳ ಮೂಲಕ ಮೋಹವನ್ನು ಬಿಡಿಸಿಕೊಳ್ಳುವುದು ಈ ಪ್ರಸಂಗದ ಸಾರವಾಗಿದೆ. ರಂಗದೃಷ್ಟಿಯಿಂದ ಈ ಪ್ರಸಂಗವನ್ನು ತಾಳಮದ್ದಲೆಯಲ್ಲಿ ಪ್ರಯೋಗಿಸಿದರೆ ಪರಿಣಾಮಕಾರಿಯಾಗಿ ಪ್ರಸಂಗದ ಆಶಯ, ಸಂದೇಶವನ್ನು ಪ್ರೇಕ್ಷಕರಿಗೆ ಮುಟ್ಟಿಸುವುದಕ್ಕೆ ಸಾಧ್ಯವಿದೆ.

## ಕಾಲ ಮಿತಿ ಯಕ್ಷಗಾನ ಪ್ರಯೋಗದ ಸಾಧಕ ಬಾಧಕಗಳು



*ಪ್ರೊ ಎಸ್ ವಿ ಉದಯ್ ಕುಮಾರ್ ಶೆಟ್ಟಿ*

**ಲೇಖಕರ ಪರಿಚಯ** – *ಪ್ರೊ ಎಸ್ ವಿ ಉದಯ್ ಕುಮಾರ್ ಶೆಟ್ಟಿ ಮಂದಾರ್ತಿ ಸಮೀಪದ ಶಿರೂರಿನವರಾಗಿದ್ದು ಎಂ ಟೆಕ್ ಪದವೀಧರರಾಗಿದ್ದಾರೆ. ಎಂಐಟಿ ಮಣಿಪಾಲ ದಲ್ಲಿ ಕಳೆದ ಮೂವತ್ತು ವರ್ಷಗಳಿಂದ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಯಕ್ಷಗಾನ ಕಲಾವಿದರು, ಭಾಗವತರು ಹಾಗು ಯಕ್ಷಗಾನ ವಿಮರ್ಶಕರಾಗಿ ಗುರುತಿಸಿಕೊಂಡಿರುವ ಇವರ ಹಲವಾರು ಲೇಖನಗಳು ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಉಡುಪಿ ಯಕ್ಷಗಾನ ಕಲಾರಂಗದ ಸಕ್ರಿಯ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ. ಯಕ್ಷಗಾನ ಅಕಾಡೆಮಿಯವರು ಪ್ರಕಟಿಸಿದ ಪುರುಷ ವೇಷದ ಪೊಗರು ಹಾಗು ಕುಷ್ಣ ಗಾಣಿಗ ಕೃತಿಗಳನ್ನು ಸಂಪಾದಿಸಿದ್ದಾರೆ.*

ಇತ್ತೀಚಿನ ದಿನಗಳಲ್ಲಿ ಯಕ್ಷಗಾನ ಮೊದಲಿನ ಹಾಗೆ ಇಡೀ ರಾತ್ರಿ ಬೇಡ. ಕಾಲಮಿತಿಗೆ ಒಳಪಡಿಸಬೇಕು ಎಂಬ ಕೂಗು ಕೆಲವು ಪ್ರೇಕ್ಷಕರಿಂದ ಅಲ್ಲಲ್ಲಿ ಕೇಳಿ ಬರುತ್ತಿದೆ. ಇದು ಕರೋನ ಸಂಕಷ್ಟದಲ್ಲಿ ಬಂದ ಕೂಗಲ್ಲ. ನಾಲ್ಕಾರು ವರ್ಷದ ಹಿಂದೆಯೇ ಎದ್ದಿದ್ದೆ ಎಂಬುದು ಗಮನಾರ್ಹ. ಅದನ್ನು ಮನಗಂಡು ಶ್ರಿ ಕ್ಷೇತ್ರ ಧರ್ಮಸ್ಥಳ ಮೇಳದವರು, ಕಲಾವಿದರೂ ಸೇರಿ ಅನೇಕ ಸುಸಂಸ್ಕೃತ ಪ್ರೇಕ್ಷಕರನ್ನು ಶ್ರಿ ಕ್ಷೇತ್ರಕ್ಕೆ ಕರೆಸಿ ವಿಚಾರ ವಿನಿಮಯ ನಡೆಸಿ ಒಂದು ನಿರ್ಣಯಕ್ಕೆ ಬಂದರು. ಅಲ್ಲಿಯೂ ಕಾಲಮಿತಿಗೆ ಪರ ವಿರೋಧ ಅಭಿಪ್ರಾಯಗಳು ವ್ಯಕ್ತವಾಗಿತ್ತು. ಕಾಲಮಿತಿ ಪ್ರಯೋಗಕ್ಕೆ ಇರುವ ಒಂದೇ ಒಂದು ಪರ ಅಭಿಪ್ರಾಯ ಎಂದರೆ ಯಕ್ಷಗಾನಕ್ಕೆ ಪ್ರೇಕ್ಷಕರ ಕೊರತೆ ಎಂಬುದು. ಅದರಲ್ಲೂ ಬೆಳಿಗ್ಗೆವರೆಗೆ ಯಾರೂ ಆಟ ನೋಡುವುದಿಲ್ಲ, ಇದರಿಂದ ಕಲಾವಿದರಿಗೆ ತೊಂದರೆ ಆಗುತ್ತದೆ ಎಂಬ ನಿಲುವು. ಕಾಲ ಬದಲಾಗಿದೆ ಎನ್ನುವುವಾಗ ಎಲ್ಲವೂ ಬದಲಾಗಿದೆ ಎನ್ನುವುದು ಕಷ್ಟ .ಎಲ್ಲಿಯೂ ತೆಂಗಿನ ಮರದಲ್ಲಿ ಮಾವಿನಕಾಯಿ ಆಗುತ್ತಿದೆ ಎಂಬುದು ಸುಳ್ಳು. ಎಲ್ಲರೂ ಅನ್ನವನ್ನೆ ಊಟ ಮಾಡುವುದು ಅಲ್ಲಿ ಬದಲಾವಣೆ ಆಗಿಲ್ಲ. ಸ್ವಲ್ಪ ಮಟ್ಟಿನ ಬದಲಾವಣೆ ಜಗದ ನಿಯಮ .ಕಲೆ ಸದಾ ಹರಿಯುತ್ತಾ ಇರಬೇಕು, ಆದರೆ ದಡ ಮೀರಿ ಹರಿಯ ಬಾರದು ಹಾಗಾದರೆ ಪ್ರವಾಹ ಆಗುವ ಬೀತಿ ಇರುತ್ತದೆ. ಹಣ ಕೊಟ್ಟು ಆಟಕ್ಕೆ, ಕೇವಲ ಮನೋರಂಜನೆಗಾಗಿ ಆಟಕ್ಕೆ ಬರುವ ವರ್ಗಕ್ಕೆ ಇದು ಅನ್ವಯಿಸಬಹುದು. ಅರ್ಧ ರಾತ್ರಿ ಎದ್ದು ಹೋದರೆ ಕಥೆ ಹೇಗೆ ಮುಕ್ತಾಯವಾಗುತ್ತದೆ ಎಂದು ತಿಳಿಯುದಿಲ್ಲ.ಅದರಿಂದ ಹೊಸ ಪ್ರಸಂಗ ಮೊಟಕುಗೊಳಿ ಸಿ ಸಣ್ಣದು ಮಾಡಬಹುದು ಎಂದು ವಾದ. ಟೆಂಟ್ ಮೇಳಗಳು ನಿಂತಿದ್ದೇ ಹೊಸ ಪ್ರಸಂಗದ ಆಧಾರದ ಮೇಲೆ. ಹಾಗಾಗಿ ಇದು ಟೆಂಟ್ ಮೇಳಕ್ಕೆ ಅನಿವಾರ್ಯ ಎನಿಸಬಹುದು. ಕರಾವಳಿಯ ಯಕ್ಷಗಾನಕ್ಕೂ, ಮನೋರಂಜನೆಯ ಇತರ ಮಾಧ್ಯಮವಾದ ಚಲನಚಿತ್ರ, ನಾಟಕ ಇತ್ಯಾದಿಗಳಿಗೆ ಬಹಳ ವತ್ಯಾಸವಿದೆ. ಯಕ್ಷಗಾನ ಮತ್ತು ಭೂತಾರಾದನೆಗೂ ಅದರದ್ದೇ ಆದ ವೈಶಿಷ್ಟವಿದೆ.



ಇದೂ ಕೇವಲ ಮನೋರಂಜನೆಗಾಗಿ ಇರುವ ಕಲೆ ಅಲ್ಲ. ಇದರಲ್ಲಿ ದೇವತಾ ಆರಾಧನೆ, ಶ್ರದ್ದೆ, ಭಕ್ತಿ ಎಲ್ಲವೂ ಅಡಕವಾಗಿದೆ. ಹಾಗಾಗಿ ಅನೇಕ ದೇವ ಕ್ಷೇತ್ರದಿಂದ ಹೊರಡುವ ಮಂದಾರ್ತಿ,ಮಾರಣಕಟ್ಟೆ ಕಟೀಲು ಸೌಕೂರು ಮುಂತಾದ ಮೇಳಗಳಿಗೆ ತನ್ನದೇ ಆದ ವೀಶೇಷವಿದೆ. ಶ್ರದ್ದೆ ಭಕ್ತಿಯಿಂದ ಸಾವಿರಾರು ಜನರಿಗೆ ಅನ್ನ ಸಂತರ್ಪಣೆ ಮಾಡಿ ಕಾಲ ಅಲ್ಲದ ಕಾಲದಲ್ಲಿ ಗಣಪತಿ ಪೂಜೆ ಮಾಡಿ ಅಕಾಲದಲ್ಲಿ ದೀವಟಿಗೆ ನಂದಿಸುವ ಈ ಕಾಲಮಿತಿಯನ್ನು ಅನೇಕ ಶ್ರದ್ದೆಯ ಭಕ್ತರು ಒಪ್ಪಲಾರರು. ಇದು ಕರೋನ ಕಾಲದಲ್ಲಿ ಮದ್ಯಾಹ್ನ ಬಿಸಿಲಿಗೆ ಆಟ ಪ್ರಾರಂಭಿಸಿ ರಾತ್ರಿ 10ಕ್ಕೆ ಮುಕ್ತಾಯ ಮಾಡಿದಾಗ ಅವರ ಅನಿಸಿಕೆ ವ್ಯಕ್ತವಾಗಿದೆ. ಒಂದು ಕಡೆ ರಂಗಸ್ಥಳ ಮುಖ ಮಾಡಿದರೆ ಪ್ರೇಕ್ಷಕರಿಗೆ ಬಿಸಿಲು, ವಿರುದ್ದ ದಿಕ್ಕಿಗೆ ಮುಖ ಮಾಡಿದರೆ ಕಲಾವಿದರಿಗೆ ಬಿಸಿಲು ಇಂತಹ ಅನೇಕ ಅವಾಂತರಗಳು, ವ್ಯತಿರಿಕ್ತ ವಾತವರಣಗಳು ಕಂಡು ಬಂದವು. ಇದನ್ನೆಲ್ಲ ತಿಳಿದ ನಮ್ಮ ಹಿರಿಯರು ಯಕ್ಷಗಾನದ ಸಮಯವನ್ನು ಈ ಹಿಂದಿನಂತೆಯೇ ಇಡೀ ರಾತ್ರಿ ನಡೆಯಲಿ ಎಂದು ನಿರ್ಣಯಿಸಿದ್ದರು. ಬೆಳಕು ಜ್ಞಾನದ ಸಂಕೇತ. ಆ ಬೆಳಕು ಕತ್ತಲೆಯನ್ನು ಹೊಡೆದೋಡಿಸಬೇಕು ವಿನಹ ಕತ್ತಲೆಯೆಡೆಗೆ ನೂಕುವುದಲ್ಲ.ಭೂತ ಪಿಶಾಚಿಗಳು ತಿರುಗುವ ಸರಿ ರಾತ್ರಿ ಹೊತ್ತಿಗೆ ದೀವಟಿಗೆ ನಂದಿಸಿದರೆ ಅಪಶಕುನ ಮಾತ್ರ ಅಲ್ಲ ಹಳ್ಳಿಗಾಡಿನ, ಶ್ರದ್ದೆಯ, ಸ್ವತಹ ವಾಹನ ಇಲ್ಲದ ಪ್ರೇಕ್ಷಕರು ಹೋಗುವುದೆಲ್ಲಿಗೆ. ಅವರ ಪಾಡೇನು?? ಯಕ್ಷಗಾನಕ್ಕೆ ಬೆಳಿಗ್ಗಿನವರೆಗೆ ಪ್ರೇಕ್ಷಕರು ನಿಲ್ಲುವುದಿಲ್ಲ ಎಂಬುದು ಒಂದೇ ವಿಷಯವಾದರೆ ಬಹಳ ಹಿಂದಿನಿಂದಲೂ ದೇವಸ್ಥಾನದ ಹಬ್ಬ ಹರಿದಿನದಲ್ಲಿ ನಡೆಯುವ ಇನ್ನೊಂದು ಇಂತಹದ್ದೇ ಸೇವೆ ಡಮರು ಸೇವೆ ಅಥವಾ ಡಕ್ಕೆಬಲಿ. ಇದನ್ನು ಬೆಳಗ್ಗಿನ ಜಾವ ಪ್ರಾರಂಭಿಸಿ ಸೂರ್ಯ ಉದಯದ ಒಳಗೆ ನಿಲ್ಲಿಸಬೇಕೆಂಬ ನಿಯಮವಿದೆ. ಈಶ್ವರನ ಕೈಯಲ್ಲಿ ಇರುವ ವೈದ್ಯರ ಡಮರುಗದ ಶಬ್ದ ಹಗಲಲ್ಲಿ ಊರಿಗೆ ಕೇಳಿಸಬಾರದು ಎಂಬ ಅಲಿಖಿತ ನಿಯಮವಿದೆ. ಇದು ಮೂಢ ನಂಬಿಕೆ ಅಲ್ಲ ಮೂಲ ನಂಬಿಕೆ. ಬೆಳಿಗ್ಗಿನ ಜಾವ ಜನ ಇರುವುದಿಲ್ಲ ಎಂದು ಮದ್ಯಾಹ್ನ ಡಕ್ಕೆಬಲಿ ಮಾಡಿದ ಉದಾಹರಣೆಯಲ್ಲಿಯಾದರೂ ಇದೆಯಾ?.ಇನ್ನು ಮುಂದೆ ಹಗಲಿಗೆ ಢಕ್ಕೆಬಲಿ ಆಗಲಿ ಅರ್ಧ ರಾತ್ರಿ ಕೋಲ ಆಗಲಿ ಎನ್ನುವ ಕೂಗು ಬಂದರೂ ಬರಬಹುದು. ಇವತ್ತಿಗೂ ಕೇವಲ ಹಿರಿಯರು ಹೇಳಿಕೊಂಡ ಸೇವೆಯನ್ನು ಹರಕೆ ಸಂದಾಯಕೋಸ್ಕರ ಮಾಡುವ ಕೆಲವು ಬುದ್ದಿಜೀವಿಗಳನ್ನು ಬಿಟ್ಟರೆ ಉಳಿದಂತೆ ಅನೇಕರಿಂದ ಕಾಲಮಿತಿಗೆ ವಿರೋಧವಿದೆ ಎಂಬ ಸತ್ಯ ಸಾಮಾಜಿಕ ಜಾಲತಾಣಗಳಲ್ಲಿ ವ್ಯಕ್ತವಾಗಿದೆ. ಆಟ ಆಡಿಸುವವರ ಮನೆಯವರು ನೆಂಟರಿಷ್ಟರು ಯಕ್ಷಗಾನ ಆಸಕ್ತರೂ ಸೇರಿ ಕೆಲವು ಮಂದಿಯಾದರೂ ಬೆಳಗ್ಗಿನವರೆಗೆ ಆಟ ನೋಡುತ್ತಾರೆ. ಏನೂ ಆಸಕ್ತಿ ಇಲ್ಲದ ಸಾವಿರ ಮಂದಿಗಿಂತ ಪ್ರಜ್ಞಾವಂತ ಐವತ್ತು ಪ್ರೇಕ್ಷಕರನ್ನು ಕಲಾವಿದ ಬಯಸುವುದು ಸತ್ಯ. ಆಶ್ಚರ್ಯಕರ ಸಂಗತಿ ಎಂದರೆ ಅನೇಕ ಹಿರಿಯ ಕಲಾವಿದರು ಕಾಲಮಿತಿಯ ಬಗ್ಗೆ ಆಸಕ್ತಿ ಹೊಂದಿಲ್ಲ ಎನ್ನುವುದು ಅನೇಕ ಕಲಾವಿದರನ್ನು ಮಾತನಾಡಿಸಿದಾಗ ತಿಳಿಯುತ್ತದೆ. ದ್ವಿಚಕ್ರ ವಾಹನ ಇರುವ ಕೆಲವು ಯುವ ಕಲಾವಿದರು ಇದನ್ನು ಬಯಸಿದರೂ ಎಲ್ಲರ ಒಲವಿಲ್ಲ.ಬೆಳಿಗ್ಗೆ ಆಟದ ಮನೆಯಲ್ಲಿ ಚಾ ಕುಡಿದು ಮೇಳದ ವಾಹನದಲ್ಲಿ ಇನ್ನೊಂದು ಊರಿಗೆ ಪ್ರಯಾಣ ಮಾಡುವುದು ಕಲಾವಿದರ ಆರೋಗ್ಯಕ್ಕೂ ಒಳ್ಳೆಯದು. ಮಧ್ಯ ರಾತ್ರಿ ಆಟ ನಿಲ್ಲಿಸಿ ಅಲ್ಲಿಯೂ ನಿದ್ದೆ ಇಲ್ಲದೇ, ಇಲ್ಲಿಯೂ ನಿದ್ದೆ ಇಲ್ಲದೆ ರಾತ್ರಿಯೇ ಹೊರಡುವುದು ,ಆಟದ ಮನೆಯ ಬಿಡಾರ ರಾತ್ರಿ ಎಂಟಕ್ಕೆ ಬಂದ್ ಆದರೆ ಮುಂದಿನ ಬಿಡಾರ ಬೆಳಿಗ್ಗೆ ಪ್ರಾರಂಭವಾದರೆ ಮನೆಗೆ ರಾತ್ರಿಯೇ ಹೋಗದ ಮೇಳದಲ್ಲಿ ಉಳಿದ ಕಲಾವಿದರ ಪಾಡು ಕೇಳುವವರಾರು. ಕಳೆದ ಐದಾರು ವರ್ಷದ ಅಂಕಿ ಅಂಶ ನೋಡಿದರೆ ಸ್ವಂತ ವಾಹನ ಅಪಘಾತ ಮಾಡಿಕೊಂಡ ಅನೇಕ ಕಲಾವಿದರ ಪಟ್ಟಿ ದೊರೆಯುತ್ತದೆ. ಯಾವುದೇ ದುಶ್ಚಟವಿಲ್ಲದ ಅತ್ಯಂತ ನಿಷ್ಠಾವಂತ ಕಲಾವಿದರು ಜೀವ ಕಳೆದು ಕೊಂಡಿದ್ದಾರೆ ಯಾ ಆಸ್ಪತ್ರೆಗೆ ದಾಖಲಾಗಿದ್ದಾರೆ. ಇವರೆಲ್ಲರೂ ಕಾಲಮಿತಿ ಆಟ ಮುಗಿಸಿ ಮನೆಗೆ ಹೋಗುವಾಗ ಅಪಘಾತಕ್ಕೀಡಾಗಿರುವುದು ಗಮನಿಸಬೇಕಾದ ಆಂಶ. ಕಲಾವಿದರ ಆರೋಗ್ಯವೂ ಕಾಲಮಿತಿಯಿಂದ ಕೆಡುವ ಸಾಧ್ಯತೆ ಇದೆ. ಕಾಲಮಿತಿ ಪ್ರಯೋಗ ಎಂಬುದು ಆನ್ ಲೈನ್ ಶಿಕ್ಷಣ ಇದ್ದಹಾಗೆ. ಅದು ಕರೋನ ಸಂದರ್ಭದಲ್ಲಿ ಅನಿವಾರ್ಯವೇ ಆಗಿತ್ತು ವಿನಹ ಸಾರ್ವಕಾಲಿಕ ಅನಿವಾರ್ಯತೆ ಅಲ್ಲ. ಇದರಿಂದ ವಿದ್ಯಾರ್ಥಿಯ ಕಲಿಕಾ ಮಟ್ಟ ಕುಸಿಯುವುದು ಸತ್ಯ .ಬೋರ್ಡ್ ಮೇಲೆ ಬರೆದು ಹೇಳಬೇಕಾದ್ದನ್ನು ಕೇವಲ ಮೊಬೈಲ್ ನಲ್ಲಿ ತೋರಿಸಿ ಹೇಳಿದರೆ ಅತ್ತ ಶಿಕ್ಷಕರಿಗೆ ತಾವು ಮಾಡಿದ ಪಾಠದ ಬಗ್ಗೆ ಅವರಿಗೇ ತೃಪ್ತಿ ಇಲ್ಲ. ಕೇಳಿದ ಮಕ್ಕಳಿಗೂ ಅರ್ಥವಾಗುವುದಿಲ್ಲ. ಕಾಲಮಿತಿಯಿಂದ ಪ್ರಸಂಗಕ್ಕೆ ಮನಬಂದಂತೆ ಕತ್ತರಿ ಹಾಕಿ ಕೇವಲ ಕೆಲವು ಪಾತ್ರಗಳಿಂದ ಪ್ರಸಂಗ ಮುಗಿಯುವುದಂತೂ ಸತ್ಯ. ರುಕ್ಮಿಣಿ, ಬಲರಾಮ, ಭೀಮ, ಇಲ್ಲದೇ ಕೃಷ್ಣಾರ್ಜುನ ಕಾಳಗ, ಬಲರಾಮ ನಾರದ ಇಲ್ಲದೇ ಕೇವಲ ಕೃಷ್ಣ ಜಾಂಬವರಿಂದ ಜಾಂಬವತಿ ಕಲ್ಯಾಣ,ನಂದಿ ಈಶ್ವರ ಮೀನಾಕ್ಷಿ ಪಾತ್ರಗಳಿಂದ ಮೀನಾಕ್ಷಿ ಕಲ್ಯಾಣ ಹೀಗೆ ಆದರೂ ಆಶ್ಚರ್ಯವಿಲ್ಲ. ಎಲ್ಲಾ ಮೇಳಗಳು ಕಾಲಮಿತಿ ಆದರೆ ಕನಿಷ್ಟ 30 ಜನ ಕಲಾವಿದರು ಇರುವ ಮೇಳಕ್ಕೆ ಹದಿನೈದು ಕಲಾವಿದರು ಸಾಕಾದರೆ ಉಳಿದ ಕಲಾವಿದರು ಎಲ್ಲಿಗೆ ಹೋಗಬೇಕು. ಬೇರೆ ಉದ್ಯೋಗ ತಿಳಿಯದ ಬಡ ಕಲಾವಿದರ ಪಾಡೇನು?ಹಿಂದಿನ ಪೌರಾಣಿಕ ಪ್ರಸಂಗಕರ್ತರು ಯಕ್ಷಗಾನದಲ್ಲಿ ಬರುವ ಪದಗಳಿಗೆ ಮುಸ್ಸಂಜೆ ರಾಗ, ಮದ್ಯ ರಾತ್ರಿಯ ರಾಗ, ಬೆಳಗ್ಗಿನ ಜಾವದ ರಾಗ, ಹಾಗೇಯೇ ಪಾತ್ರಗಳನ್ನು ಹಂಚಿ ಹಾಕಿದ್ದಾರೆ. ಮುಸ್ಸಂಜೆಯ, ಕೇದಾರಗೌಳ, ನಾಟಿ, ಶಂಕರಾಭರಣ ಮದ್ಯಮಾವತಿ, ಭೈರವಿ, ಸೌರಾಷ್ಟ ಮುಂತಾದ ರಾಗಗಳನ್ನು ಬೆಳಗ್ಗಿನ ಜಾವದಲ್ಲೂ, ಮುಂಜಾನೆ ಹಾಡಬೇಕಾದ ಅಠಾಣ, ಸಾವೇರಿ, ಮೋಹನ, ಬಿಲಹರಿ ಮುಂತಾದ ರಾಗಗಳನ್ನು ಪ್ರಾರಂಭದಲ್ಲಿ ಹಾಡಿದರೆ ಕೇಳಲಾಗುತ್ತದೆಯೇ? ಬೆಳಗ್ಗಿನ ನಿದ್ದೆಯ ಮಂಪರನ್ನು ಹೊಡೆದೆಬ್ಬಿಸಬಲ್ಲ ಬಣ್ಣದ ವೇಷ ಆಟದ ಪ್ರಾರಂಭಕ್ಕೆ ಬಂದರೆ??? ಬೆಳಗ್ಗಿನ ಜಾವಕ್ಕೆ ಸೂಕ್ತ ಎಂದು ಪರಿಗಣಿಸಲ್ಪಟ್ಟ ಕರ್ಣಾರ್ಜುನ–ಜಾಂಬವತಿ ಕಲ್ಯಾಣ–ಮೀನಾಕ್ಷಿ ಕಲ್ಯಾಣ–ಕನಕಾಂಗಿ ಕಲ್ಯಾಣ ಪ್ರಸಂಗಗಳನ್ನು ಬೆಳಿಗ್ಗೆ ಪ್ರೇಕ್ಷಕರಿಲ್ಲ ಎಂದು ಪ್ರಾರಂಭಕ್ಕೆ ಆಡಿಸಿದರೆ ಪ್ರಸಂಗದ ಸ್ವಾರಸ್ಯ ಉಳಿದೀತೆ?? ಸದ್ಯ ಅನೇಕ ಹಿರಿಯ ಮೇಳಗಳು ಕಾಲಮಿತಿಯ ಕೂಗಿಗೆ ಬಲಿ ಬೀಳದಿದ್ದದ್ದು ನಿಜಕ್ಕೂ ಶ್ಲಾಘನೀಯ. ದೇವಸ್ಥಾನಗಳು ಕಾಲ ಕಾಲಾಂತರದಿಂದ ಪಾಲಿಸಿಕೊಂಡು ಬಂದ ಶಿಸ್ತಿಗೆ ಈ ಮೇಳಗಳು ಒಗ್ಗಿಕೊಂಡದ್ದನು ಪ್ರಶಂಸಿಸಲೇಬೇಕು .ಚಲನ ಚಿತ್ರ ಮಂದಿರಗಳಲ್ಲೂ ಕೇವಲ 30–40 ಮಂದಿಗೆ ಚಿತ್ರ ಪ್ರದರ್ಶನ ತೋರಿಸುವ ಈ ಕಾಲದಲ್ಲಿ ಯಕ್ಷಗಾನದಂತ ದೇವತಾ ಕಾರ್ಯಕ್ಕೆ ಜನರ ನಿರೀಕ್ಷೆ ಮಾಡುವುದು ತಪ್ಪು. ಮದ್ಯಾಹ್ನ ಊಟಕ್ಕೆ ಬಂದವರಲ್ಲಿ ಅನೇಕರು ಆಟಕ್ಕೆ ಬರುವುದಿಲ್ಲ. ಊಟಕ್ಕೆ 1000 ಜನ ಬಂದರೇ ಆಟಕ್ಕೆ ಕೇವಲ 100 ಜನ. ಅದಕ್ಕೋಸ್ಕರ ನಮ್ಮ ಬೆಳಕಿನ ಸೇವೆ ಯಾಕೆ ಮೊಟುಕುಗೊಳಿಸಬೇಕು? ಅದಾಗ್ಯೂ ಟಿಕೇಟ್ ಕೊಟ್ಟು ಆಟ ನೋಡುವ ಪ್ರೇಕ್ಷಕರು ಕಡಿಮೆ ಆಗುತ್ತಿರುವ ಈ ಸಂದರ್ಭದಲ್ಲಿ ಕನಿಷ್ಟ ಖರ್ಚು ಉಳಿಸಲೋಸ್ಕರವಾದರೂ ಕೇವಲ ಮನೋರಂಜನೆಗೆ ಮಾತ್ರ ಸೀಮಿತವಾದ ಟೆಂಟ್ ಮೇಳಗಳು ಕಾಲಮಿತಿಯ ಬಗ್ಗೆ ಆಲೋಚನೆ ಮಾಡಬಹುದು.



**ಡಿಬೇಟ್ ಕಾರ್ನರ್ – ಸಂವಾದಕ್ಕೊಂದು ವೇದಿಕೆ**

ಮುಂದಿನ ಸಂಚಿಕೆಯಿಂದ ನಮ್ಮ ಓದುಗರಿಗಾಗಿ ಡಿಬೇಟ್ ಕಾರ್ನರ್ ಎಂಬ ಹೊಸ ಅಂಕಣ ಪ್ರಾರಂಭವಾಗಲಿದೆ. ಈ ಅಂಕಣದಲ್ಲಿ ಯಕ್ಷಗಾನ ಕ್ಷೇತ್ರದ ಬೆಳವಣಿಗೆ/ ಬದಲಾವಣೆ, ಬೇಕು–ಬೇಡಗಳ ಕುರಿತು ಆರೋಗ್ಯಕರ ಸಂವಾದ ನಡೆಯಲಿದೆ. ಈ ಚರ್ಚಾ ಕೂಟದಲ್ಲಿ ತಾವೂ ತಮ್ಮ ಅನಿಸಿಕೆ ಅಭಿಪ್ರಾಯಗಳನ್ನು ಹಂಚಿಕೊಳ್ಳುವ ಮೂಲಕ ಭಾಗವಹಿಸಲು ಮುಕ್ತ ಅವಕಾಶ ಕಲ್ಪಿಸಲಾಗಿದೆ. ಬರುವ ತಿಂಗಳ ಸಂಚಿಕೆಯ ಚರ್ಚೆಗೆ ನಿಮ್ಮ ಮುಂದಿಡುತ್ತಿರುವ ವಿಷಯ: ***ಡಿಜಿಟಲ್ ಮಾಧ್ಯಮಗಳ ಬಳಕೆ ಯಕ್ಷಗಾನಕ್ಕೆ ಪೂರಕವೇ? ಮಾರಕವೇ?*** ನಿಮ್ಮ ಲೇಖನ, ಅಭಿಪ್ರಾಯಗಳನ್ನು ಕಳುಹಿಸಬೇಕಾದ ವಾಟ್ಸಾಪ್ ಸಂಖ್ಯೆ –9449686807. ನಿಮ್ಮ ಲೇಖನ ಎ ಫೋರ್ ಹಾಳೆಯಲ್ಲಿ ಒಂದು ಪುಟ ಮೀರದಿರಲಿ. ಆಯ್ದ ಉತ್ತಮ ಲೇಖನಕ್ಕೆ ಬಹುಮಾನವಿದೆ

**– ಸಂಪಾದಕರು**

# ಧೀರಕಲೆಯೊಳಗೆ ಕೀರವಾಣಿಯರು – 01

## ಗಂಡುಮೆಟ್ಟಿನ ಕಲೆಯ ಪರಿಧಿಯಿಂದೆತ್ತರಕೆ ಬೆಳೆದವರು – ಶ್ರೀಮತಿ ಲೀಲಾವತಿ ಬೈಪಾಡಿತ್ತಾಯ

*ಲೇಖಕರು – ಸಾಯಿಸುಮಾ ಎಂ. ನಾವಡ ಕಾರಿಂಜ ಇವರು ವೃತ್ತಿಯಲ್ಲಿ ಕನ್ನಡ ಉಪನ್ಯಾಸಕಿ. ಜೊತೆಗೆ ಯಕ್ಷಗಾನ ವೇಷಧಾರಿ, ತಾಳಮದ್ದಳೆ ಅರ್ಥಧಾರಿ. ಯಕ್ಷಾವಾಸ್ಯಮ್ ಕಾರಿಂಜ (ರಿ) ಇದರ ಸಂಸ್ಥಾಪಕಿ/ ನಿರ್ದೇಶಕಿ. ಯಕ್ಷಗಾನ ಕ್ಷೇತ್ರದಲ್ಲಿ ಸುಮಾರು ಹದಿನಾರು ವರ್ಷಗಳ ಅನುಭವ ಹೊಂದಿದ್ದಾರೆ.*



*ಸಾಯಿಸುಮಾ ಎಂ. ನಾವಡ*

ಮನೆಯ ಪರಿಧಿಯೊಳಗೆ ಹೆಂಗಸೋರ್ವಳು ಜೀವನವಡೀ ಸವೆಯುತ್ತಲೇ ಇದ್ದ ಕಾಲವದು. ಯಕ್ಷಗಾನದಲ್ಲಿ ತೊಡಗಿಸಿಕೊಳ್ಳುವುದು ಬಿಡಿ, ಆಟ ನೋಡುವುದಕ್ಕೂ ಅನುಮತಿಯಿರಲಿಲ್ಲ. ಅಂತಹ ಸಂದರ್ಭದಲ್ಲಿ 'ಹೆಂಗಸು ಹಾಡುವುದಾ?' ಎಂದು ಜನರೆಲ್ಲಾ ಮೂಗಿಗೆ ಬೆರಳಿಟ್ಟ ಗಳಿಗೆಯಲ್ಲಿ, ಗಂಡುಮೆಟ್ಟಿನ ಕಲೆಯ ಪರಿಧಿಯಿಂದೆತ್ರಕೆ ಬೆಳೆದವರು ಶ್ರೀಮತಿ ಲೀಲಾವತಿ ಬೈಪಾಡಿತ್ತಾಂ ಯರು. ಸಂಗೀತದತ್ತ ಒಲವನ್ನು ಹೊಂದಿದ್ದ ಶ್ರೀಗಂಗಾ ಯಕ್ಷಗಾನವನ್ನು ಅಷ್ಟಾಗಿ ನೋಡದ, ಯಕ್ಷಗಾನದ ಯಾವ ಕೌಟುಂಬಿಕ ಹಿನ್ನೆಲೆಯೂ ಇಲ್ಲದ ಹೆಣ್ಣುಮಗಳು



ಲೀಲಾವತಿ ಬೈಪಾಡಿತ್ತಾಯ

ಕೈಹಿಡಿದವರ ಪ್ರೋತ್ಸಾಹದಿಂದಾಗಿ ಲೀಲಾವತಿ ಬೈಪಾಡಿತ್ತಾಯರಾಗಿ ಯಕ್ಷರಂಗದಲ್ಲಿ ಸಮರ್ಥ ಪ್ರಥಮ ವ್ಯವಸಾಯಿ ಭಾಗವತರಾಗಿ ಎಪ್ಪತ್ತರ ದಶಕದಿಂದ ಕಾಣಿಸಿಕೊಂಡದ್ದೇ ಒಂದು ಸೋಜಿಗ. 1947 ರ ಮೇ 23 ರಂದು ದಿ. ಪುಂಡರೀಕಾಕ್ಷ ಹೆಬ್ಬಾರ್ ಹಾಗೂ ದಿ. ಮಹಾಲಕ್ಷ್ಮಿ ಅಮ್ಮ ಇವರ ಮಗಳಾಗಿ ಜನಿಸಿದ ಲೀಲಾವತಿ ಬೈಪಾಡಿತ್ತಾಯರು ಶಾಲೆಗೆ ಹೋಗದೆ ಓದಲು ಕಲಿತವರು. ಬಹಳ ಬೇಗನೇ ಅಪ್ಪ ಇಹಲೋಕ ತ್ಯಜಿಸಿದಾಗ, "ನಿನ್ನ ಸ್ವರ ಚೆನ್ನಾಗಿದೆ ಮಗಾ, ಸಂಗೀತ ಕಲಿ" ಎಂಬ ಅಪ್ಪನ ಮಾತನ್ನು ಮನದಲ್ಲಿರಿಸಿಕೊಂಡು, ಸಂಬಂಧಿಕರಾದ ಪಿಟೀಲು ವಾದಕ ಮಧೂರು ಪದ್ಮನಾಭ ಸರಳಾಯರಲ್ಲಿ ಸೀನಿಯರ್ ವರೆಗಿನ ಸಂಗೀತಾಭ್ಯಾಸವನ್ನು ಮಾಡುತ್ತಾರೆ. ಶಾಲೆಗೆ ಹೋಗಿ ಅಕ್ಷರಾಭ್ಯಾಸವನ್ನು ಮಾಡುವುದಕ್ಕಾಗದಿದ್ದರೂ ಸ್ವ– ಅಭ್ಯಾಸದಿಂದಲೇ 'ರಾಷ್ಟ್ರಭಾಷಾ ವಿಶಾರದ' ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಭೇಷ್ ಎನಿಸಿಕೊಂಡವರು. 1970 ರಲ್ಲಿ ತನ್ನ 23 ನೇ ವಯಸ್ಸಿನಲ್ಲಿ ಯಕ್ಷರಂಗದ ಹಿಮ್ಮೇಳವಾದಕರಾದ ಶ್ರೀ ಹರಿನಾರಾಯಣ ಬೈಪಾಡಿತ್ತಾಯರ ವಿವಾಹವಾದ ಬಳಿಕ ಇವರ ಜೀವನ ಹೊಸ ತಿರುವೊಂದನ್ನು ಪಡೆದುಕೊಳ್ಳುತ್ತದೆ. ಯಜಮಾನರ ಪ್ರೋತ್ಸಾಹಭರಿತ ಮಾತಿನಿಂದಾಗಿ, ಅಷ್ಟಾಗಿ ಯಕ್ಷಗಾನದತ್ತ ಆಕರ್ಷಣೆಯಿಲ್ಲದಿದ್ದರೂ ಜಾಗಟೆ ಕೋಲು ಹಿಡಿದ ಲೀಲಮ್ಮನವರು ಮತ್ತೆ ಬರೆದದ್ದೆಲ್ಲಾ ಇತಿಹಾಸ. ಹೆಣ್ಣನ್ನು ತನಗಿಂತ ಕೆಳಗೆ ಎಂದು ಪುರುಷ ಸಮಾಜ ಕಾಣುತ್ತಿದ್ದ ವೇಳೆಯಲ್ಲಿ ತಾನೇ ಇದ್ದ ಯಕ್ಷಗಾನ ಕ್ಷೇತ್ರದಲ್ಲಿ ತನ್ನ ಕೈ ಹಿಡಿದವಳನ್ನು ಜೊತೆಜೊತೆಗೆ ಕರಕೊಂಡು ಮುಂದೆ ಸಾಗಿದ ಸಹೃದಯಿ ಶ್ರೀ ಹರಿನಾರಾಯಣ ಬೈಪಾಡಿತ್ತಾಯರಿಗೆ ನಾವು ಶಿರಬಾಗಲೇಬೇಕು. ಪತಿಯ ಸಹಕಾರದಿಂದ ಭಾಗವತಿಕೆ ಕಲಿತು, ಆರಂಭದಲ್ಲಿ ಕಡಬದ ತನ್ನ ಮನೆಯಲ್ಲಿ, ಅಲ್ಲೇ ಸಮೀಪದ ಸ್ಥಳಗಳಲ್ಲಿ ನಡೆಯುತ್ತಿದ್ದ ತಾಳಮದ್ದಳೆಗಳಲ್ಲಿ ತನ್ನ ಪತಿ ಹಾಗೂ ಮೈದುನಂದಿರ ಸಹಕಾರದೊಂದಿಗೆ ಹಾಡುತ್ತಿದ್ದ ಲೀಲಮ್ಮ, 1976 ರಲ್ಲಿ ಪುತ್ತೂರಿನಲ್ಲಿ ಲಕ್ಷ್ಮೀಶ ತೋಳ್ಪಾಡಿ ಹಾಗೂ ದಾಸರಬೈಲು ಚನಿಯ ನಾಯ್ಕರು ಏರ್ಪಡಿಸಿದ್ದ ತಾಳಮದ್ದಳೆಯೊಂದರಲ್ಲಿ ಸಾರ್ವಜನಿಕವಾಗಿ ಅದೇ ಮೊದಲಬಾರಿಗೆ "ಕೃಷ್ಣಸಂಧಾನ ಪ್ರಸಂಗ"ದಲ್ಲಿ ಹಾಡಿದ್ದರು. ಮೂಡಂಬೈಲು ಗೋಪಾಲಕೃಷ್ಣ ಶಾಸ್ತ್ರಿಗಳಂತಹ ಘಟಾನುಘಟಿಗಳ ಎದುರು ಹಾಡುವ ಅವಕಾಶ ದೊರೆತಿತ್ತು. ಮಹಿಳಾ ಭಾಗವತರಿದ್ದಾರೆ ಎಂದು ವಿಶೇಷ ಪ್ರಚಾರವೂ ಆರಂಭವಾಯಿತು. 1977 ರಲ್ಲಿ ಆದಿಸುಬ್ರಹ್ಮಣ್ಯ ಮೇಳದ ಮಾಲೀಕರಾದ ಪುತ್ತೂರು ಶೀನಪ್ಪ ಭಂಡಾರಿ "ನಮ್ಮ ಮೇಳಕ್ಕೆ ಭಾಗವತಿಕೆಗೆ ಬರಬಹುದಾ?" ಎಂದು ಪ್ರಸ್ತಾಪವಿತ್ತಿದ್ದರು. ಆ ಬಳಿಕ ಒಮ್ಮೆ ಕಡಬ ಸಮೀಪದ ಕಲ್ಲುಗುಡ್ಡೆಯಲ್ಲಿ ದಿ. ಮುಳಿಯ ಕೇಶವಯ್ಯ ವಿರಚಿತ 'ಯೇಸುಕ್ರಿಸ್ತ ಮಹಾತ್ಮೆ'ಯಲ್ಲಿ ಅದೇ ಮೊದಲ ಬಾರಿಗೆ ತಾಳಮದ್ದಳೆಗಳಲ್ಲಿ ಹಾಡುತ್ತಿದ್ದ ಲೀಲಮ್ಮ ಯಕ್ಷಗಾನದಲ್ಲಿ ಹಾಡಿದ್ದರು. ಮಹಿಳೆಯೋರ್ವಳು ಹಾಡುತ್ತಿದ್ದಾಳೆ ಎಂದು ತಿಳಿಯುತ್ತಿದ್ದ ಕಾಲದಲ್ಲಿ ಅನೇಕ ಸವಾಲುಗಳನ್ನು ಎದುರಿಸಿ, ಸಮರ್ಥ ಭಾಗವತರಾಗಿ ಹೊರಹೊಮ್ಮಿದವರು ಲೀಲಮ್ಮ. ಬಿಟ್ಟಿ ಪ್ರಚಾರಕ್ಕಾಗಿ ಗಂಡಸನ್ನು ಸ್ತ್ರೀವೇಷ ಹಾಕಿಸಿ ಹಾಡುವುದಕ್ಕೆ ಕೂರಿಸುತ್ತಿರಬೇಕು ಎನ್ನುವವರು ಕೆಲವರು, ಹೆಣ್ಣು ಹಾಡಿದರೆ ಎಷ್ಟು ಹಾಡಿಯಾಳು ಎನ್ನುವವರು ಹಲವರು, ಪ್ರಚಾರಕ್ಕೆ ಬೇಕಾಗಿ ಹೆಣ್ಣೋರ್ವಳನ್ನು ಕರೆದುಕೊಂಡು ತಿರುಗಾಟ ಮಾಡುವ ಕಾಲ ಬಂತು ಎಂದು ಹಂಗಿಸುವವರು ಅನೇಕರು. ಇವುಗಳೆಡೆಯಲ್ಲಿ ಹಾಡುವ ಹೆಂಗಸು ಯಾರು? ಎಂದು ಅಚ್ಚರಿಯಿಂದ ನೋಡಿ ಪ್ರೋತ್ಸಾಹಿಸುವ ಕೈಗಳೂ ಇರುತ್ತಿದ್ದವು. ಭಾಗವತರೆಂದರೆ ನಿರ್ದೇಶಕರು. ಓರ್ವ ಮಹಿಳೆ ಸಮರ್ಥವಾಗಿ ನಿರ್ದೇಶನದ ಸ್ಥಾನವನ್ನು ತುಂ ಬಿದ್ದಾರೆಂದರೆ ಅದು ಸಣ್ಣ ಮಾತಲ್ಲ. ಮೊದಲ ಬಾರಿಗೆ ಯಕ್ಷಗಾನಕ್ಕಾಗಿ ಹಾಡುವಾಗಲೇ ದೊಡ್ಡ ಸಾಮಗರ ಪ್ರೋತ್ಸಾಹ, ಬಳಿಕ ಬಲಿಪರಂತಹ ಅನೇಕರ ಮಾರ್ಗದರ್ಶನ ಹೀಗೆ ಅನೇಕರ ಸಹಕಾರದಿಂದ ಪ್ರಥಮ ವ್ಯವಸಾಯಿ ಭಾಗವತರಾಗಿ ಕಾಣಿಸಿಕೊಂಡವರು ಲೀಲಮ್ಮ. ಪೇಜಾವರ ಶ್ರೀಗಳಿಂದಲೂ "ಆಹಾ ಭಾರೀ ಪದ್ಯ ಪಂಡರ್" ಎಂದು ಹೊಗಳಿಸಿಕೊಂಡ ಹಿರಿಮೆ ಇವರದು. ತೆಂಕಿನಲ್ಲಿ ಮಾತ್ರವಲ್ಲದೇ ಬಡಗಿನಲ್ಲೂ ತೆಂಕಿನ ಧ್ವನಿಯನ್ನು ಕೇಳಿಸಿದವರು. 1971 ರಿಂದೀಚೆಗೆ ಸುಮಾರು ಐವತ್ತು ವರ್ಷಗಳ ಸಮಗ್ರ ಅನುಭವ ಹೊಂದಿದ ಇವರು ಅಳದಂಗಡಿ, ಕುಂಬಳೆ, ಬಪ್ಪನಾಡು, ತಲಕಳ ಮೇಳಗಳಲ್ಲಿ ಸುಮಾರು 20–25 ವರ್ಷಗಳ ಕಾಲ ಪೂರ್ಣ ತಿರುಗಾಟವನ್ನೂ, ಆದಿಸುಬ್ರಹ್ಮಣ್ಯ, ಪುತ್ತೂರು, ಸುರತ್ಕಲ್, ಕರ್ನಾಟಕ, ಕದ್ರಿ ಮೇಳಗಳಲ್ಲಿ ಅತಿಥಿ ಭಾಗವತರಾಗಿ ತಿರುಗಾಟವನ್ನು ಮಾಡಿ ಸೈ ಎನಿಸಿಕೊಂಡವರು. ದೇಶದಾದ್ಯಂತ ಅನೇಕ ಯಕ್ಷಗಾನ ಕಾರ್ಯಕ್ರಮಗಳಲ್ಲಿ ಭಾಗವಹಿಸಿದವರು. ಕರ್ನಾಟಕ ಯಕ್ಷಗಾನ ಅಕಾಡೆಮಿ ಪ್ರಶಸ್ತಿ, ಆಳ್ವಾಸ್ ನುಡಿಸಿರಿ ಪ್ರಶಸ್ತಿ, ಉಳ್ಳಾಲ ರಾಣಿ ಅಬ್ಬಕ್ಕ ಪ್ರಶಸ್ತಿ. 'ಯಕ್ಷಪ್ರಮೀಳಾ' ಪುರಸ್ಕಾರ ಮುಂತಾದ ಅನೇಕ ಪ್ರಶಸ್ತಿ, ಸಂಮಾನಗಳು ಇವರನ್ನು ಅರಸಿ ಬಂದಿವೆ. ಇತ್ತೀಚೆಗಷ್ಟೇ ತಮ್ಮ ಶಿಷ್ಯವೃಂದದವರಿಂದ ತಮ್ಮ ಪತಿಯ ಜೊತೆಗೆ "ಶ್ರೀಹರಿಲೀಲಾ" ಅಭಿನಂದನೆಯನ್ನು ಸ್ವೀಕರಿಸಿದವರು. ಕೆಲವು ಸಿನಿಮಾಗಳಿಗೆ ಹಾಡಿದ ಇವರು ಅನೇಕ ಟಿವಿ ಸಂದರ್ಶನಗಳಲ್ಲಿ ಭಾಗವಹಿಸಿದವರು, ಕ್ಯಾಸೆಟ್, ಸಿಡಿಗಳಿಗಾಗಿಯೂ ಹಾಡಿದವರು. ಸಂಪೂರ್ಣ ಯಕ್ಷಕುಟುಂಬ ಇವರದು. ಸತಿ–ಪತಿಯರು ಯಕ್ಷರಂಗದಲ್ಲಿ ತೊಡಗಿಸಿಕೊಂಡದ್ದರ ಜೊತೆಗೆ, ಮಕ್ಕಳಾದ ಗುರುಪ್ರಸಾದ್ ಬೈಪಾಡಿತ್ತಾಯ ಹಾಗೂ ಅವಿನಾಶ ಬೈಪಾಡಿತ್ತಾಯರಿಗೂ ಕಲಾಸಕ್ತಿಯನ್ನು ಮೂಡಿಸಿ, ಮೊಮ್ಮಕ್ಕಳ ಮೂಲಕ ಮುಂದಿನ ಪೀಳಿಗೆಗೂ ದಾಟಿಸಿದವರು.ಧರ್ಮಸ್ಥಳ ಲಲಿತಕಲಾ ಕೇಂದ್ರ ಹಾಗೂ ಅನೇಕ ಕಡೆಗಳಲ್ಲಿ ಯಕ್ಷಗಾನ ತರಗತಿಗಳನ್ನು ನಡೆಸಿ ತಮ್ಮ ಪತಿಯ ಜೊತೆಗೂಡಿ ಯಕ್ಷಗಾನ ಕಲೆಯನ್ನು ನಿಂತ ನೀರಾಗಿಸದೇ ಹರಿಸುತ್ತಿರುವವರು ನಮ್ಮ ಲೀಲಮ್ಮ. ಪರಂಪರೆಯ ಸೊಗಡನ್ನು ತನ್ನದೇ ಅಸ್ತಿತ್ವದೊಂದಿಗೆ ಉಳಿಸಿಕೊಂಡು, ಬೆಳೆಸಿದ ಯಕ್ಷರಂಗದ ಅದ್ಭುತ ಮಹಿಳೆ ಶ್ರೀಮತಿ ಲೀಲಾವತಿ ಬೈಪಾಡಿತ್ತಾಯರು 70 ರ ದಶಕದಲ್ಲೇ ಮಹಿಳೆ ಹೊರಜಗತ್ತಿಗೆ ತೆರೆದುಕೊಳ್ಳಲಾರಂಭಿಸಿದ್ದಾಳೆ ಎಂಬುದನ್ನು ಸಾಬೀತುಪಡಿಸಿದವರು. ಅನೇಕ ಹೆಮ್ಮಕ್ಕಳ ಮನದಲ್ಲಿ ಯಕ್ಷರಂಗದ ಆಸೆಯನು ಬಿತ್ತಿದವರು. ದೂರದಿಂದಲೇ ಯಕ್ಷಗಾನದ ಅಂದವನ್ನು ಕಣ್ತುಂಬಿಕೊಳ್ಳುತ್ತಿದ್ದವರು ಸ್ವತಃ ಭಾಗವಹಿಸುವ ಮನ ಮಾಡುವಂತಾದುದಕ್ಕೆ ಇವರು ನಾಂದಿಯಾದವರೆಂದರೆ ಹೆಚ್ಚಲ್ಲ.

*ನಿಮಗಿದು ಗೊತ್ತೇ?? – ಯಕ್ಷಗಾನದಲ್ಲಿ ಯಕ್ಷಗಾನ ಸಾಹಿತ್ಯವಲ್ಲದೆ ಇತರ ಸಾಹಿತ್ಯ ಪ್ರಕಾರಗಳಿಂದ ಅನೇಕ ಹಾಡುಗಳನ್ನು ಬಳಸಿಕೊಳ್ಳಲಾಗಿದೆ. ಯಕ್ಷಗಾನ ಸ್ತುತಿ ಪದ್ಯವಾಗಿ ಹೆಚ್ಚು ಪ್ರಚಲಿತದಲ್ಲಿರುವ ವಾರಣ ವದನ ಪದ್ಯವು ಪಾವಂಜೆ ಲಕ್ಷ್ಮೀನಾರಾಯಣಾಚಾರ್ಯರು ರಚಿಸಿರುವ ಹರಿದಾಸ ಕೀರ್ತನೆಯಾಗಿದೆ. ಇದೇ ರೀತಿ ಹೆಚ್ಚು ಪ್ರಚಲಿತದಲ್ಲಿರುವ ಎಲ್ಲೆಲ್ಲೂ ಸೊಬಗಿದೆ ಪದ್ಯವು ಕವಿ ಗಂಗಾಧರ ಎಸ್ ಶಾಸ್ತ್ರಿ ಯವರು ಬರೆದ ಕಿರುಗವನವಾಗಿದೆ (ಭಾವಗೀತೆ).*

*ಕಿರುಸುದ್ದಿ – ಇತ್ತೀಚಿಗೆ ದೈವಾಧೀನರಾದ ತೆಂಕು ತಿಟ್ಟಿನ ಪ್ರಸಿದ್ಧ ಯಕ್ಷಗಾನ ಕಲಾವಿದ ತೋಡಿಕಾನ ವಿಶ್ವನಾಥ ಗೌಡ ರು 43 ವರ್ಷಗಳ ಕಾಲ ತಿರುಗಾಟ ನಡೆಸಿದ್ದಾರೆ. ಪದ್ರೆ ಚಂದುರವರು ಹಾಗೂ ಕುರಿಯ ವಿಠಲ ಶಾಸ್ತ್ರಿಯವರು ಇವರ ಯಕ್ಷಗಾನದ ಗುರುಗಳಾಗಿದ್ದರು, ಅಲ್ಲದೆ ಇವರು ಕುದ್ಕಾಡಿ ವಿಶ್ವನಾಥ ರೈಗಳಲ್ಲಿ ಭರತ ನಾಟ್ಯ ಅಭ್ಯಾಸ ಮಾಡಿದ್ದರು*

**ಗಮನಿಸಿ– ನಮ್ಮ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳ ಅನಿಸಿಕೆ ಅಭಿಪ್ರಾಯಗಳು ಲೇಖಕರದ್ದೇ ಹೊರತು, ಸಂಪಾದಕ ಮಂಡಳಿಯದ್ದಲ್ಲ – ಸಂಪಾದಕರು**

## ಕಾಡುವ ಪಾತ್ರ/ ಪ್ರಸಂಗ/ ಸನ್ನಿವೇಶ

ಕಲಾವಿದರ ಯಕ್ಷಾನುಭವದ ಪ್ರಮುಖ ನೆನಪು/ಘಟನೆಗಳನ್ನು ದಾಖಲೀಕರಿಸುವ ಅಂಕಣ ಇದು. ಪ್ರತೀ ಸಂಚಿಕೆಯಲ್ಲಿ ಇಬ್ಬರು ಕಲಾವಿದರ ಅನುಭವಗಳನ್ನು ಇಲ್ಲಿ ಸಾದರಪಡಿಸುತ್ತಿದ್ದೇವೆ. ಈ ತಿಂಗಳ ಸಂಚಿಕೆಯಲ್ಲಿ ಮದ್ದಳೆ ವಾದಕರಾದ ಪದ್ಯಾಣ ಶಂಕರ ನಾರಾಯಣ ಹಾಗೂ ಹಾಸ್ಯಗಾರರಾದ ಹಳ್ಳಾಡಿ ಜಯರಾಮ ಶೆಟ್ಟಿಯವರ ಅನುಭವಗಳ ತುಣುಕು ಪ್ರಕಟವಾಗಿದೆ.

## ಪದ್ಯಾಣ ಶಂಕರ ನಾರಾಯಣ ಭಟ್



ಜನನ: 16–04–1950,

ತಂದೆ: ರಾಮಕೃಷ್ಣ ಭಟ್

ತಾಯಿ ಪಾರ್ವತಿಯಮ್ಮ

ಪತ್ನಿ : ವನಜಾಕ್ಷಿ

ವಿದ್ಯಾರ್ಹತೆ: ಬಿಎ

ಸೇವೆ ಸಲ್ಲಿಸಿದ ಮೇಳಗಳು: ಕುಂಡಾವು ಮೇಳ, ಕರ್ನಾಟಕ ಮೇಲ, ಸುರತ್ಕಲ್ ಮೇಳ, ಸುಂಕದಕಟ್ಟೆ, ಕಟೀಲು, ಕದ್ರಿ, ಕುಂತರು, ಎಡನೀರು, ಹೊಸನಗರ, ಹನುಮಗಿರಿ ಮೇಳ

ಅನುಭವ: 49 ವರ್ಷಗಳು

70– 80– 90 ರ ದಶಕದ ದಿಗ್ಗಜರೆನಿಸಿಕೊಂಡ ದಾಮೋದರ ಮಂಡೆಚ್ಚ ಭಾಗವತರು, ಅಗರಿ ಶ್ರೀನಿವಾಸ ಭಾಗವತರು, ಕುಂಡೆಚ್ಚ ಭಾಗವತರು, ಕಡತೋಕ, ಕುರಿಯ, ಇತ್ತೀಚಿಗಿನ ರಾಮಕೃಷ್ಣ ಜೋಯಿಸರು, ಪುತ್ತಿಗೆ ರಘುರಾಮ ಹೊಳ್ಳ, ಕುರಿಯ ಗಣಪತಿ ಶಾಸ್ತ್ರಿಗಳು, ಪದ್ಯಾಣ ಗಣಪತಿ ಭಟ್ ಮೊದಲಾದವರೊಂದಿಗೆ ಹಿಮ್ಮೆಳದ ವೇದಿಕೆಯನ್ನು ಹಂಚಿಕೊಂಡಿರುವ ಅನುಭವದಲ್ಲಿ ಹಿಮ್ಮೇಳ ಪರಿಕರವಾದಕರ ಮನೋಧರ್ಮ ಹೇಗಿರಬೇಕು ಎಂಬುದನ್ನು ಪದ್ಯಾಣ ಶಂಕರನಾರಾಯಣ ಭಟ್ ರವರು ವಿವರಿಸುವುದು ಹೀಗೆ –

ರಂಗದಲ್ಲಿ ಭಾಗವತನೇ ಶ್ರೇಷ್ಠ. ಅವರನ್ನು ಮೊದಲ ವೇಷಧಾರಿ ಎಂದು ಹೇಳುತ್ತಾರೆ. ಆತನೇ ನಿರ್ದೇಶಕ. ಆತನಿಗೆ ಪ್ರಸಂಗ ನಡೆಯ ಬಗ್ಗೆ ಸಮಗ್ರ ಅನುಭವ ಇರಬೇಕು.. ಹಿಮ್ಮೇಳ ಕಲಾವಿದರಿಗೆ ವ್ಯಕ್ತಿಗತ ಸ್ವಾತಂತ್ರ್ಯ ಎನ್ನುವುದು ಇಲ್ಲ, ಆದ್ರೆ ಜವಾಬ್ದಾರಿ ಇದೆ. ಪದ್ಯದ ಲಯ ಭಾವನೆ ಮೀರಿ ಚೆಂಡೆ ಮದ್ದಳೆ ಬಾರಿಸಬಾರದು, ಭಾಗವತರ ಮನೋಧರ್ಮವನ್ನು ಅರಿತು ನಮ್ಮ ಮನೋಧರ್ಮವನ್ನು ಹೊಂದಿಸಿ ನುಡಿಸುವುದೇ ಹಿಮ್ಮೇಳದವರ ಕೆಪಾಸಿಟಿ. ದುಶ್ಯಾಸನ ವಧೆ ಅಚ್ಚುಮೆಚ್ಚಿನ ಪ್ರಸಂಗ. ಇಂತಹ ಅಪರೂಪದ ಪ್ರಸಂಗಗಳು ಇಂದು ಪ್ರದರ್ಶನವೇ ಆಗುತ್ತಿಲ್ಲ. ಪುರಾಣ ಪ್ರಸಂಗಗಳಿಗೆ ಅದರದ್ದೇ ಆದ ಕ್ರಮಗಳು ಇಂದು ಕಣ್ಮರೆಯಾಗಿದೆ. ಪ್ರಸಂಗಗಳಲ್ಲಿ ಕರುಣ ರಸದ ಸನ್ನಿವೇಶಗಳು ತೃಪ್ತಿ ಹಾಗು ಮೆಚ್ಚುಗೆಯಾಗುವಂತಹ ವಿಷಯಗಳು. ಮಂಡೆಚ್ಚ ಭಾಗವತರು ಯಾವ ಸಂದರ್ಭಕ್ಕೆ ಯಾಗ ರಾಗ ಬಳಸಬೇಕು ಎಂಬುದರ ಬಗ್ಗೆ ಹೆಚ್ಚಿನ ನೈಪುಣ್ಯ ಹೊಂದಿದ್ದರು. ಯಕ್ಷಗಾನದಲ್ಲಿ ಶಾಸ್ತ್ರೀಯತೆ ಪ್ರವೇಶಿಕೆ ಪಡೆದುಕೊಂಡಿದೆ. ನಾಟ್ಯದಲ್ಲಿ ಭರತ ನಾಟ್ಯ ಅನುಕರಣೆ ಮಾಡ್ತಾರೆ. ಹೊಸತನಕ್ಕೆ ಸರಿಯಾಗಿ ನಾವೂ ಬದಲಾವಣೆ ಮಾಡಿಕೊಳ್ಳಬೇಕಾಗುತ್ತದೆ. ಕಲೆ ನಿಂತ ನೀರಿನ ಹಾಗಿರಬಾರದು. ಬದಲಾವಣೆ ನಡೆದೇ ತೀರುತ್ತದೆ. ಭಾಗವತರ ಮನೋಧರ್ಮ ಅರಿತು ಚೆಂಡೆ ಮದ್ದಳೆಯವರು ಹೊಂದಿಕೊಂಡು ಹೋಗಬೇಕು. ಯಾವತ್ತಿದ್ರೂ ಉಳಿದುಕೊಳ್ಳುವಂಥದ್ದು ಉಳಿದುಕೊಳ್ಳುತ್ತದೆ. ಬೇಡವಾದ್ದು ನಶಿಸಿ ಹೋಗುತ್ತದೆ. ಬೇರೆ ಕಲೆಗಳ ಆಮದಿನಿಂದ ಯಕ್ಷಗಾನದ ಶೈಲಿ ಮಾಯವಾಗ್ತಾ ಇರೋದಂತೂ ನಿಜ.

## ಹಳ್ಳಾಡಿ ಜಯರಾಮ ಶೆಟ್ಟಿ, ಹಾಸ್ಯ ಕಲಾವಿದರು



ಜನನ: 01–02– 1956

ತಂದೆ: ಅಣ್ಣಪ್ಪ ಶೆಟ್ಟಿ

ತಾಯಿ: ಅಕ್ಕಮ್ಮ ಶೆಡ್ತಿ

ಪತ್ನಿ: ರೇಣುಕಾ

ಮಕ್ಕಳು: ರತೀಶ, ಸುಕನ್ಯಾ

ಸೇವೆ ಸಲ್ಲಿಸಿರುವ ಮೇಳಗಳು: ಕಮಲಶಿಲೆ, ಮಂದಾರ್ತಿ, ಅಮೃತೇಶ್ವರಿ, ಮುಲ್ಕಿ, ಕುಂಬಳೆ, ಸಾಲಿಗ್ರಾಮ, ಪೆರ್ಡೂರು, ಹಟ್ಟಿಯಂಗಡಿ

ಯಕ್ಷಗಾನದ ಗುರುಗಳು: ಹಳ್ಳಾಡಿ ಮಂಜಯ್ಯ ಶೆಟ್ಟಿ


ಹಾಸ್ಯ ಕಲಾವಿದರಾದ ಶ್ರೀಯುತ ಹಳ್ಳಾಡಿ ಜಯರಾಮ ಶೆಟ್ಟಿಯವರು ಸುಮಾರು 55 ವರ್ಷಗಳ ಕಾಲ ಯಕ್ಷಗಾನದಲ್ಲಿ ಸೇವೆ ಸಲ್ಲಿಸಿರುವುದನ್ನು ಗುರುತಿಸಿ ಯಕ್ಷಗಾನ ಅಕಾಡೆಮಿಯು ಯಕ್ಷ ಸಿರಿ ಪ್ರಶಸ್ತಿ ನೀಡಿ ಗೌರವಿಸಿರುವುದಕ್ಕೆ "ಕಲಾಸೇವೆ ಮಾಡಿರುವುದಕ್ಕೆ ನನಗೆ ಸಾರ್ಥಕ ಭಾವ ಮೂಡಿದೆ" ಎಂದು ಹರ್ಷ ವ್ಯಕ್ತ ಪಡಿಸುತ್ತಾರೆ. ಯಕ್ಷಗಾನದಲ್ಲಿ ಗುರುತಿಸಿಕೊಳ್ಳುವ ಆರಂಭದಲ್ಲೇ ಹಾಸ್ಯ ಪಾತ್ರಗಳ ಬಗ್ಗೆ ವಿಶೇಷ ಆಸಕ್ತಿ ಹೊಂದಿದ್ದ ಜಯರಾಮ ಶೆಟ್ಟರಿಗೆ ಮೊದಲ ಬಾರಿಗೆ ಅಮೃತೇಶ್ವರಿ ಮೇಳದಲ್ಲಿ ಮೋಹನ ತರಂಗಿಣಿ ಪ್ರಸಂಗದಲ್ಲಿ ಬೆಸ್ತನ ಪಾತ್ರ ನಿರ್ವಹಿಸುವ ಅವಕಾಶ ದೊರಕಿತ್ತಂತೆ. ಆ ಪಾತ್ರವನ್ನು ಬೇರೆ ಕಲಾವಿದರೊಬ್ಬರು ನಿರ್ವಹಿಸುತ್ತಿದ್ದಾಗ ಅದನ್ನೇ ಆಸಕ್ತಿಯಿಂದ ಗಮನಿಸುತ್ತಿದ್ದು, ಆ ಪಾತ್ರ ನಿರ್ವಹಿಸುವ ವ್ಯಕ್ತಿ ರಜೆ ಹಾಕಿದಾಗ ಅದೇ ಪಾತ್ರದಲ್ಲಿ ಅಭಿನಯಿಸುವ ಅವಕಾಶ ಇವರಿಗೆ ಒದಗಿತಂತೆ. ಅದನ್ನೇ ಬಳಸಿಕೊಂಡು ಜಯರಾಮ ಶೆಟ್ಟರು ಹಾಸ್ಯದ ವಿಭಾಗದಲ್ಲೇ ಪಳಗುತ್ತಾ ಬಂದರು. ಪೌರಾಣಿಕ ಪ್ರಸಂಗಗಳಲ್ಲಿ ಕಾಶಿ ಮಾಣಿ, ಚಂದಗೋಪ, ಹಾಗೂ ಚಂದಗೋಪನ ತಾಯಿ, ದಮಯಂತಿ ಪುನರ್ ವಿವಾಹದಲ್ಲಿ ಬಾಹುಕ, ಕನಕಾಂಗಿ ಕಲ್ಯಾಣದ ಬಲರಾಮನ ದೂತ, ನಾಗಶ್ರೀಯಲ್ಲಿ ಕೈರವ, ಭೀಷ್ಮ ವಿಜಯದ ಬ್ರಾಹ್ಮಣ ಇವರಿಗೆ ತುಂಬ ಖುಷಿ ನೀಡಿದ ಪಾತ್ರಗಳು. ರಸಿಕರತ್ನ, ಅಭಿನಯ ಚತುರ, ರಾಜಹಾಸ್ಯ, ಮೊದಲಾದ ಅಭಿದಾನಗಳನ್ನು ಗಳಿಸಿರುವ ಜಯರಾಮ ಶೆಟ್ಟರು ಹಾಸ್ಯಕ್ಕೆ ಅದರದೆ ಆದ ಚೌಕಟ್ಟು ಇದೆ. ಹಾಸ್ಯದ ಹೆಸರಿನಲ್ಲಿ ಅಶ್ಲೀಲ ಅಸಂಬದ್ಧ ಹಾಸ್ಯ ನಟಿಸುವುದು ಸಮಂಜಸವಲ್ಲ. ಇದರಿಂದ ಕೌಟುಂಬಿಕ ಪ್ರೇಕ್ಷಕರು ಮುಜುಗರಕ್ಕೆ ಒಳಗಾಗುವಂತಾಗುತ್ತದೆ. ಅದರಿಂದ ಸದಭಿರುಚಿಯ ಪ್ರೇಕ್ಷಕರು ಯಕ್ಷಗಾನದಿಂದ ವಿಮುಖರಾಗುವ ಆಪತ್ತು ಇದೆ ಎಂದು ಅವರು ಹೇಳುತ್ತಾರೆ.

### ಚಾರಿಟಿ ರೂಮ್

ಬಪ್ಪನಾಡು ಮೇಳದ ಕಲಾವಿದರಾದ ಶ್ರೀ ಜಯಾನಂದ ಸಂಪಾಜೆಯವರು ದಿನಾಂಕ 17–02–2022 ರಂದು ರಂಗಸ್ಥಳದಲ್ಲಿ ಪಾತ್ರ ನಿರ್ವಹಿಸುತ್ತಿರುವಾಗ ದುರದೃಷ್ಟವಶಾತ್ ಕುಸಿದು ಬಿದ್ದು ಕಾಲ್ಮುರಿತಕ್ಕೆ ಒಳಗಾಗಿದ್ದಾರೆ. ಇದೀಗ ಮೂರು ಲಕ್ಷದಷ್ಟು ವೆಚ್ ಕಾಲಿನ ಸರ್ಜರಿ ಮಾಡಿಸಿಕೊಂಡು ಬೆಡ್ ರೆಸ್ಟ್ ನಲ್ಲಿರುವ ಸಂಪಾಜೆಯವರಿಗೆ ಆರ್ಥಿಕ ಬೆಂಬಲದ ಅವಶ್ಯಕತೆ ಬಹಳಷ್ಟಿದೆ. ಆಸ್ಪತ್ರೆಯ ವೆಚ್ಚ ಹಾಗೂ ಮುಂದಿನ ಹಾಗೂ ಮುಂದಿನ ಆರು ತಿಂಗಳ ಕಾಲ ನಡೆಯಲಾಗದ ಪರಿಸ್ಥಿತಿ ಇರುವ ಕಾರಣ ಜೀವನ ನಿರ್ವಹಣೆ ಕಷ್ಟಕರವಾಗಿದೆ. ಆದ್ದರಿಂದ ಯಕ್ಷಗಾನವನ್ನೇ ನಂಬಿರುವ ಈ ಕಲಾವಿದನ ಬಾಳಿಗೆ ಅಭಿಮಾನಿಗಳು ಆಸರೆಯಾಗಬೇಕಾಗಿದೆ. ಹೃದಯ ಕಲಾಭಿಮಾನಿಗಳು ಈ ಕಲಾವಿದನ ಈ ಸಂಕಷ್ಟಕ್ಕೆ ನೆರವಾಗಬೇಕು ಎಂದು ಪತ್ರಿಕಾ ಬಳಗ ಮನವಿ ಮಾಡಿಕೊಳ್ಳುತ್ತಿದೆ. ಜಯಾನಂದ್ ಸಂಪಾಜೆಯವರ ಬ್ಯಾಂಕ್ ವಿವರ ಕೆಳಗೆ ನೀಡಲಾಗಿದೆ. *ಬ್ಯಾಂಕ್ ಖಾತೆ ವಿವರ* *Jayananda S T* *Canara bank Sampaje* *A/c no 0643101006611* *IFSC code CNRB 000643* *Google account 9731435243* *Phone pay: 9731435243*

## ನಮ್ಮ ಲೈಬ್ರರಿ

ಸಾಹಿತ್ಯ ಲೋಕಕ್ಕೆ ಯಕ್ಷಗಾನ ಕ್ಷೇತ್ರದ ಪ್ರಬುದ್ಧ ಬರವಣಿಗೆಗಳು ಬೃಹತ್ ಕೊಡುಗೆಯಾಗಿವೆ. ಇಂತಹಾ ಪುಸ್ತಕಗಳು ಜ್ಞಾನ ವಿಸ್ತಾರಗೊಳಿಸುವಲ್ಲಿ ಸಂಗ್ರಹಯೋಗ್ಯ ಕೃತಿಗಳು ಎನ್ನುವುದರಲ್ಲಿ ಎರಡು ಮಾತಿಲ್ಲ. ಅಂತಹಾ ಅನೇಕ ಪುಸ್ತಕಗಳು ಓದುಗರಿಗೆ ಮಾಹಿತಿ ಇಲ್ಲದೆ ಇಲ್ಲದೇ ಇರಬಹುದು, ಅಥವ ಅಲಭ್ಯವಾಗಿರಬಹುದು. ಲೇಖಕರು ಹಾಗೂ ಪ್ರಕಾಶನಗಳಿಂದ ಇಂತಹ ಕೃತಿಗಳನ್ನು ಓದುಗರಿಗೆ ತಲುಪಿಸುವ ಕೊಂಡಿಯಾಗಿ ನಮ್ಮ ಲೈಬ್ರರಿ ಮಾಹಿತಿ ನೀಡಲಿದೆ. ಈ ತಿಂಗಳ ಸಂಚಿಕೆಯಲ್ಲಿ ಕಟೀಲು ಕ್ಷೇತ್ರ ಮಹಾತ್ಮೆ



**ಕೃತಿ: ಶ್ರೀ ಕಟೀಲು ಕ್ಷೇತ್ರ ಮಹಾತ್ಮೆ** (ವಾಗ್ವರ್ಥ ಸಹಿತ)

ಪ್ರಸಂಗ ರಚನೆ: ಅಭಿನವ ನಾಗವರ್ಮ ಡಾ. ಎನ್ ನಾರಾಯಣ ಶೆಟ್ಟಿ

ಸಂಭಾಷಣೆ ರಚನೆ: ಅಭಿನವ ವಾಲ್ಮೀಕಿ ಬೊಟ್ಟಿಕೆರೆ ಪುರುಷೋತ್ತಮ ಪೂಂಜ

ಪ್ರಕಾಶನ: ಅಜೆಕಾರು ಬಾಲಕೃಷ್ಣ ಶೆಟ್ಟಿ, ಅಜೆಕಾರು ಕಲಾಭಿಮಾನಿ ಬಳಗ ಮುಂಬಯಿ

ಪ್ರತಿಗಳಿಗಾಗಿ ಸಂಪರ್ಕ ಸಂಖ್ಯೆ: ದಿವಿತ್ ಕೋಟ್ಯಾನ್, ಉಪನ್ಯಾಸಕರು, ದೂ: 9845109989

**ಒಳಗೇನಿದೆ??**

ಅಭಿನವ ನಾಗವರ್ಮ ಡಾ. ಎನ್ ನಾರಾಯಣ ಶೆಟ್ಟಿ ವಿರಚಿತ ಯಕ್ಷಗಾನ ಸಾಹಿತ್ಯದ ಮೇರು ಕೃತಿ ಕಟೀಲು ಕ್ಷೇತ್ರ ಮಹಾತ್ಮೆ. ಸಾಹಿತ್ಯದಲ್ಲಿ ಆಳವಾದ ಅಧ್ಯಯನ ನಡೆಸಿರುವ ಡಾ. ನಾರಾಯಣ ಶೆಟ್ಟರು ಬರೆದಿರುವ ಯಕ್ಷಗಾನ ಪ್ರಸಂಗಗಳು ಘನತೂಕವುಳ್ಳದ್ದು. ಪ್ರೌಢಿಮೆಯ ಛಂದೋಬಂಧಗಳಿಂದ ಈ ಕೃತಿ ಶೃಂಗರಿತವಾಗಿದೆ. ಈ ಪ್ರಸಂಗಕ್ಕೆ ಅರ್ಥ ಸಹಿತ ವಿವರಣೆ ನೀಡಿದ್ದಾರೆ ಮತ್ತೊಬ್ಬ ಮೇಧಾವಿ ಅಭಿನವ ವಾಲ್ಮೀಕಿ ದಿ. ಬೊಟ್ಟಿಕೆರೆ ಪುರುಷೋತ್ತಮ ಪೂಂಜ. ಇತ್ತೀಚಿನ ಕಲಾವಿದರಲ್ಲಿ ರಂಗಭಾಷೆ ಕ್ಷೀಣವಾಗುತ್ತಿದೆ. ಅದನ್ನು



ಗಮನದಲ್ಲಿರಿಸಿಕೊಂಡು ಪ್ರಸಂಗದ ಪದ್ಯಗಳಿಗೆ ಅರ್ಥಗಳನ್ನು ಬರೆಯಲಾಗಿದೆ. ಪ್ರದರ್ಶನದಲ್ಲಿ ವಿಷಯ ಕೊರತೆಯಾಗದಾಗ ಕಲಾವಿದರ ಮಾತುಗಳು ಎತ್ತೆತ್ತಲೋ ಹೋಗುವುದಿದೆ. ಒಬ್ಬ ಕಲಾವಿದ ಪ್ರಸಂಗದೊಳಗೇ ಸಂಭಾಷಣೆ ನಡೆಸಬೇಕು ಎಂಬ ಆಶಯದಲ್ಲಿ ಇದು ಕಲಾವಿದರಿಗೆ ಪದ್ಯಕ್ಕೆ ಅರ್ಥ ಹೇಳಲು ಮಾರ್ಗದರ್ಶಿಯಾಗಿದೆ. ಇಲ್ಲೇ ಪುರುಷೋತ್ತಮ ಪೂಂಜರ ಮೇಷ್ಟ್ರತನವೂ ಸಾಕಷ್ಟು ಕೆಲಸ ಮಾಡಿದೆ. ಪ್ರಸಂಗ ಪದ್ಯ ಬರೆಯುವುದಕ್ಕೆ ಅಧ್ಯಯನಶೀಲತೆ ಎಷ್ಟು ಮುಖ್ಯವೋ ಅಷ್ಟೇ ಅಧ್ಯಯನ ಶೀಲತೆ ಅರ್ಥ ಬರೆಯುವಲ್ಲಿಯೂ ಮುಖ್ಯ ಎನ್ನುವುದು ಇಲ್ಲಿ ಎದ್ದು ಕಾಣುತ್ತದೆ.



ಪದ್ಯ ಹಾಗೂ ಅರ್ಥ ಬರೆದಿರುವ ಇಬ್ಬರೂ ಕವಿಗಳೇ ಆಗಿರುವುದರಿಂದ ಉನ್ನತ ಪದಪುಂಜ, ಶುದ್ಧ ಭಾಷೆ ಹಾಗು ಅರ್ಥಪೂರ್ಣ ಜೋಡಣೆ, ಜಟಿಲವಿಲ್ಲದ ನಿರೂಪಣೆ, ವಿಸ್ತಾರವಾದ ಪದ್ಯಾರ್ಥದಲ್ಲಿ ವಿಷಯ ಸಂಗ್ರಹಣೆಗೆ ಕೊರತೆ ಇಲ್ಲದಿರುವುದು, ಕೃತಿಯ ಗುಣಾತ್ಮಕ ಅಂಶ. ಜ್ಞಾನಕೋಶವನ್ನು ವಿಸ್ತರಿಸಬಯಸುವ ಪ್ರತಿಯೊಬ್ಬ ಕಲಾವಿದನೂ ಸಾಹಿತ್ಯಾಸಕ್ತರೂ ಓದಲೇ ಬೇಕಾದ ಕೃತಿಯಿದು. ಈ ಅರ್ಥ ಸಹಿತ ಪ್ರಸಂಗ ಪುಸ್ತಕಕ್ಕೆ ಪುರುಷೋತ್ತಮ ಪೂಂಜರ ಅಂತರಂಗವನ್ನು ಚೆಂದದ ಮುನ್ನುಡಿಯಲ್ಲಿ ಗಣೇಶ್ ಕೊಲೆಕಾಡಿಯವರು ತೆರೆದಿಟ್ಟಿದ್ದಾರೆ.

"ವೃತ್ತಿಪರ ಕಲಾವಿದರೇ ಸಂಭಾಷಣೆಗಳನ್ನು ಮನಬಂದಂತೆ ನಡೆಸುವುದನ್ನು ನಾನು ಗಮನಿಸಿದ್ದೇನೆ. ಕೆಲವೊಮ್ಮೆ ಈ ಸಂಭಾಷಣೆಗಳು ಕವಿಯ ಆಶಯಕ್ಕೆ ವಿರುದ್ಧವಾಗಿ ನಡೆಯುವುದೂ ಇದೆ. ಆಗೆಲ್ಲ ಈ ಸುಪ್ರಸಿದ್ಧ ಕೃತಿಗೆ ಸರಳವಾದ ಸಿದ್ಧ ಸಂಭಾಷಣೆಯನ್ನು ರಚಿಸುವ ಆಲೋಚನೆ ಮನಸಿನಲ್ಲಿ ಇಣುಕಿ ಮರೆಯಾಗುತ್ತಿತ್ತು. ಅಜೆಕಾರು ಬಾಲಕೃಷ್ಣ ಶೆಟ್ಟರು ಸದ್ರಿ ಪ್ರಸಂಗಕ್ಕೆ ಅರ್ಥ ಬರೆಯಲು ಕೇಳಿಕೊಂಡಾಗ ಮಿಂಚಿ ಮರೆಯಾಗುತ್ತಿದ್ದ ಆಲೋಚನೆ ಕಾರ್ಯ ರೂಪಕ್ಕಿಳಿಯಿತು. ಮೇಳದ ವೃತ್ತಿ ಕಲಾವಿದರಲ್ಲೂ, ಹೊಸಬರು ಸ್ವತಂತ್ರ ಸಂಭಾಷಣೆಗೆ ಶಕ್ತರಾಗುವ ನಿಟ್ಟಿನಲ್ಲಿ ಈ ಕೃತಿ ಸಹಾಯವಾಗಹುದು" – ಬಿ. ಪುರುಷೋತ್ತಮ ಪೂಂಜ, ಪ್ರಸಂಗಕ್ಕೆ ಅರ್ಥ ಬರೆದವರು ಹಾಗೂ ಭಾಗವತರು, ಯಕ್ಷಕವಿ

## ಯಕ್ಷ ಸಂಪನ್ಮೂಲ



**ಕೇಂದ್ರದ ಹೆಸರು: ಯಕ್ಷ ಸಂವರ್ಧನ ಶಿವಮೊಗ್ಗ**

ನೀಡುತ್ತಿರು ಸೇವೆ/ ಸೌಲಭ್ಯಗಳು: ವಾರಾಂತ್ಯಗಳಲ್ಲಿ ಹಿಮ್ಮೇಳ ಮುಮ್ಮೇಳ ಮುಖವರ್ಣಿಕೆ ತರಬೇತಿ,

ಕೇಂದ್ರ ಕಛೇರಿ: ಶಿವಮೊಗ್ಗ

ಮುಖ್ಯಸ್ಥರು: ಶ್ರೀ ಐನಬೈಲು ಪರಮೇಶ್ವರ ಹೆಗಡೆ, ನಿರ್ದೇಶಕರು, ಯಕ್ಷ ಸಂವರ್ಧನ ಶಿವಮೊಗ್ಗ

ನಿರ್ದೇಶಕರ ಹಿನ್ನಲೆ: ವೇಷಧಾರಿ, ಭಾಗವತ, 30 ವರ್ಷಗಳಿಂದ ಯಕ್ಷಗಾನ ಶಿಕ್ಷಕ, ಸಂಸ್ಥೆಯ ನಿರ್ದೇಶಕ


ಸಂಪರ್ಕ ಸಂಖ್ಯೆ: 94800 18915

ಸಂಸ್ಥೆಯ ಸಂಪನ್ಮೂಲ: 1. ಮಕ್ಕಳ, ಮಹಿಳೆಯರ ಹಾಗೂ ಪುರುಷರ ಮೂರು ಯಕ್ಷಗಾನ ತಂಡಗಳು

2. ವಾರ್ಷಿಕ 60 ಕಾರ್ಯಕ್ರಮಗಳನ್ನು ನೀಡುವ ಸಾಮರ್ಥ್ಯ


3. ನೆರೆ ಜಿಲ್ಲೆಗಳಲ್ಲಿ ಶಿಬಿರಗಳ ಆಯೋಜನೆ,

4. ಶಿವಮೊಗ್ಗದ ಶಾರದಾ ದೇವಿ ಅಂಧರ ವಿಕಾಸ ಕೇಂದ್ರದಲ್ಲಿ ಹೊಸ್ತೋಟ ಮಂಜುನಾಥ ಭಾಗವತರು ಪ್ರಾರಂಭಿಸಿದ ಅಂಧ ವಿದ್ಯಾರ್ಥಿಗಳಿಗೆ ಯಕ್ಷಗಾನ ತರಬೇತಿಯನ್ನು ಮುಂದುವರೆಸಿಕೊಂಡು ಬರುತ್ತಿದ್ದಾರೆ.






## ರಸಸ್ಫುರಣೆ



ರಜನೀಶ ಹೊಳ್ಳ

ಲೇಖಕರು – ಕೆಂಪಿನಮಕ್ಕಿಯ ರಜನೀಶ ಹೊಳ್ಳರು, ಮೂಡುಬಿದ್ರೆಯ ಆಳ್ವಾಸ್ ಕಾಲೇಜಿನಲ್ಲಿ ಸಂಸ್ಕೃತ ಉಪನ್ಯಾಸಕರಾಗಿದ್ದಾರೆ. ಯಕ್ಷಗಾನಕ್ಕೆ ಸಂಬಂಧಿಸಿದ ಅನೇಕ ಲೇಖನಗಳನ್ನು ಬರೆದಿದ್ದಾರೆ.

ಸಾಹಿತ್ಯದರ್ಪಣ ಎಂಬ ಕಾವ್ಯಲಕ್ಷಣಗ್ರಂಥದಲ್ಲಿ ವಿಶ್ವನಾಥನು ವಾಕ್ಯಮ್ ರಸಾತ್ಮಕಂ ಕಾವ್ಯಮ್ ಎಂಬುದಾಗಿ ಕಾವ್ಯಲಕ್ಷಣವನ್ನು ಪ್ರತಿಪಾದಿಸಿದ್ದಾನೆ. ರಸಸಹಿತವಾದ ವಾಕ್ಯವೇ ಕಾವ್ಯವೆನಿಸಿಕೊಳ್ಳುತ್ತದೆ. ಎಂಬುದು ಈ ಲಕ್ಷಣದ ಸ್ಥೂಲನೋಟ. ರಸವೇ ಒಂದು ಕಾವ್ಯದ ಆತ್ಮಶಕ್ತಿಯಾಗಿದೆ.
ಶೃಂಗಾರಹಾಸ್ಯಕರುಣರೌದ್ರವೀರಭಯಾನಕಾ:/ ಬೀಭತ್ಸಾದ್ಭುತಶಾಂತಾಶ್ಚ ನಾಟ್ಯೇ ನವರಸಾ: ಸ್ಮೃತಾ:// ಶೃಂಗಾರ, ಹಾಸ್ಯ, ಕರುಣ, ರೌದ್ರ, ವೀರ, ಭಯಾನಕ, ಬೀಭತ್ಸ, ಅದ್ಭುತ,ಶಾಂತ ಹೀಗೆ ಒಂಬತ್ತು ರಸಗಳು.



ಯಕ್ಷಗಾನಪ್ರಸಂಗವನ್ನು ಅವಲೋಕಿಸಿದಾಗ ಇಲ್ಲಿಯೂ ರಸವೇ ಜೀವಾಳವಾಗಿದೆ ಎನ್ನಲು ಯಾವುದೇ ಅಡ್ಡಿ ಇಲ್ಲ. ಪ್ರಸಂಗಗಳಲ್ಲಿ ವೀರ, ಕರುಣ, ಶೃಂಗಾರಾದಿಗಳು ಪ್ರಮುಖ ರಸವಾಗಿರುತ್ತವೆ. ಉಳಿದ ರಸಗಳು ಅಲ್ಲಲ್ಲಿ ಬಂದು ಹೋಗುತ್ತವೆ. ಭಕ್ತಿಪ್ರಧಾನವಾದ ಪ್ರಸಂಗಗಳೂ ಸಹ ಶಾಂತ, ಕರುಣ, ವೀರರಸಗಳ ಆಶ್ರಯದಲ್ಲಿ ಶಕ್ತಿಯುತವಾಗುತ್ತವೆ. ಸುಧನ್ವಕಾಳಗದಂತಹ ಪ್ರಸಂಗದಲ್ಲಿ ಭಕ್ತಿಯು ಪ್ರಸಂಗಗಳು ರಸಪ್ರಧಾನವಾಗಿ ರಚಿತವಾಗಿದ್ದರೂ ಅದು ಅಭಿವ್ಯಕ್ತಿಗೊಳ್ಳುವುದು ಹಿಮ್ಮೇಳ ಮುಮ್ಮೇಳಗಳ ಪ್ರದರ್ಶನದ ಮೇಲೆಯೇ ಅವಲಂಬಿತವಾಗಿದೆ. ಈ ನಿಟ್ಟಿನಲ್ಲಿ ರಸಸ್ಫುರಣೆ ಭಾಗವತನಿಂದಲೇ ಆರಂಭ ಮತ್ತು ಅವನೇ ಆಧಾರವಾಗಿದ್ದಾನೆ. ಉದಾಹರಣೆಗೆ ಕರುಣರಸದ ಅಭಿವ್ಯಕ್ತಿ ವೇಷಧಾರಿಯಿಂದ ಆಗಬೇಕಾದರೆ ಭಾಗವತನು ಹಾಡುವ ಪದ್ಯವು ಕರುಣಾರಸಪೂರ್ಣವಾಗಿದ್ದರೆ ಮಾತ್ರ ಸಾಧ್ಯ. ಮದ್ದಲೆ, ಚಂಡೆ, ಚಕ್ರತಾಳಗಳು ಸಹ ಆಯಾ ರಸಸ್ಪುರಣೆ ಉಂಟುಮಾಡುತ್ತವೆ. ಶೃಂಗಾರರಸದ ಪದ್ಯಗಳಿಗೆ ಮದ್ದಲೆ ನುಡಿಸುವುದಕ್ಕೂ ವೀರರಸಕ್ಕೆ ನುಡಿಸುವುದಕ್ಕೂ ವ್ಯತ್ಯಾಸವಿದೆ. ವೀರರಸದ ಪದ್ಯಕ್ಕೆ ಚಂಡೆಯ ಪೆಟ್ಟು



ಕೇಳದಿದ್ದರೆ ರಸೋತ್ಪತ್ತಿ ಕಷ್ಟ. ಯಕ್ಷಗಾನದಲ್ಲಿ ರಸೋತ್ಪತ್ತಿಗೆ ಹಿಮ್ಮೇಳ ಮುಮ್ಮೇಳ ಎರಡೂ ಕಾರಣವಾಗಿವೆ. ಆಗ ಮಾತ್ರ ರಸಾಸ್ವಾದನೆ ಮಾಡುವ ಪ್ರೇಕ್ಷಕನ ಮನದಲ್ಲಿ ಆನಂದಾನುಭೂತಿಯಾಗಲು ಸಾಧ್ಯ. ಮುಮ್ಮೇಳದ ಅಭಿವ್ಯಕ್ತಿಯು ರಸೋತ್ಕರ್ಷೆಯನ್ನು ವೇಗವಾಗಿ ಮತ್ತು ಸುಲಭವಾಗಿ ಮಾಡುತ್ತದೆ. ರಸನಿಷ್ಪತ್ತಿಯು ಹೇಗೆ ಆಗುತ್ತದೆ? ಎಂಬುದನ್ನು ಭರತಮುನಿಯ ರಸಸೂತ್ರವು ಹೀಗೆ ವಿವರಿಸುತ್ತದೆ.
ವಿಭಾವಾನುಭಾವವ್ಯಭಿಚಾರಿಭಾವಸಂಯೋಗಾತ್ ರಸನಿಷ್ಪತ್ತಿ:/ ಭಾವ, ಅನುಭಾವ, ವ್ಯಭಿಚಾರಿಭಾವಗಳ ಸಂಯೋಗದಿಂದ ರಸನಿಷ್ಪತ್ತಿಯಾಗುತ್ತದೆ. ರಸವು ಜನ್ಯ, ವಿಭಾವವು ಜನಕ. ರಸೋತ್ಪತ್ತಿಗೆ ಪೂರಕವಾದ ಸಾಹಿತ್ಯ, ವಾತಾವರಣ, ವೇಷಗಾರಿಕೆ ಇವೆಲ್ಲವೂ ವಿಭಾವವಾಗುತ್ತದೆ. ಅನುಭಾವವು ನಟನೆ, ಅಭಿನಯ, ಸ್ವರದ ಸಂಯೋಜನೆ ಮೊದಲಾದವು. ಸ್ಥಾಯಿಭಾವಗಳಲ್ಲಿ ಪ್ರಾದುರ್ಭಾವ, ತಿರೋಭಾವಗಳಿಂದ ಚರಿಸುವವು ವ್ಯಭಿಚಾರಿಭಾವ. ಇವು ಸ್ಥಾಯಿಯಲ್ಲ, ಬಂದುಹೋಗುವ ಭಾವಗಳಾಗಿರುತ್ತವೆ. ಇವೆಲ್ಲದರ ಸಂಯೋಗದಿಂದ ರಸ ನಿಷ್ಪತ್ತಿಯಾಗುತ್ತದೆ. ಯಾವುದೇ ರಸಾಭಿವ್ಯಕ್ತಿಯಾಗಬೇಕಾದರೆ ನಟ/ವೇಷಧಾರಿಗೆ ರಸದ ಸ್ಥಾಯಿಭಾವಗಳ ಸ್ವಭಾವ ಚೆನ್ನಾಗಿ ತಿಳಿದಿರಬೇಕು. ಶೃಂಗಾರಾದಿ ರಸಗಳ ಸ್ಥಾಯಿಭಾವವನ್ನು ನೋಡೋಣ. ಶೃಂಗಾರಕ್ಕೆ ರತಿ, ಹಾಸ್ಯಕ್ಕೆ ಹಾಸ, ಕರುಣಕ್ಕೆ ಶೋಕ, ರೌದ್ರಕ್ಕೆ ಕ್ರೋಧ, ವೀರಕ್ಕೆ ಉತ್ಸಾಹ, ಭಯಾನಕಕ್ಕೆ ಭಯ, ಬೀಭತ್ಸಕ್ಕೆ ಜುಗುಪ್ಸೆ, ಅದ್ಭುತಕ್ಕೆ ವಿಸ್ಮಯ ಮತ್ತು ಶಾಂತರಸಕ್ಕೆ ಶಮ ಇವುಗಳು ಸ್ಥಾಯಿಭಾವಗಳಾಗಿವೆ.

## ರಸನಿಮಿಷ


ದಿ। ಕೃಷ್ಣಮೂರ್ತಿಹೆಬ್ಬಾರ್

ಕೊಪ್ಪ ತಾಲೂಕಿನ ಕಮ್ಮರಡಿಯಲ್ಲಿ ಒಂದು ತಾಳಮದ್ದಲೆ. ಸುಮಾರು 50 ವರ್ಷಗಳ ಹಿಂದೆ.
ಪ್ರಸಂಗ; ರುಕ್ಮಿಣೀ ಸ್ವಯಂವರ.
(ಈ ಘಟನೆ ಯನ್ನು ನನ್ನ ಅಜ್ಜ ದಿ। ಕೃಷ್ಣಮೂರ್ತಿಹೆಬ್ಬಾರ್ ಇವರು ಹೇಳಿದ್ದು)
ಪ್ರಸಿದ್ಧ ಅರ್ಥದಾರಿಗಳ ರುಕ್ಮ. ನನ್ನ ಅಜ್ಜನದ್ದೇ ಕೃಷ್ಣ. ರುಕ್ಮನ ಅರ್ಥದಾರಿಗಳಿಗೆ ಪುರಾಣಸಾಹಿತ್ಯ ಕರತಲಾಮಲಕ! ಹೀಗೇ ರುಕ್ಮ, ಕೃಷ್ಣರ ನಡುವೆ ವಾದ ಬೆಳೆದು, ರುಕ್ಮನೆಂದ; ಎಲವೋ ಕೃಷ್ಣ! ನೀನು ಗಂಡುಸೇ ಅಲ್ಲ! ಒಂದು ವೇಳೆ ಹೌದಾದರೆ, ನಿನಗೆ ಕಸ್ತೂರಿ ತಿಲಕವೇಕೆ? ಕೈಗೆ ಕಂಕಣವೇಕೆ? ಮೂಗಿನ ತುದಿಯಲ್ಲಿ ಬುಲಾಕು ಏಕೆ?? ಎಂದು ಕಸ್ತೂರಿ ತಿಲಕಂ ಶ್ಲೋಕವನ್ನು ಹೇಳಿದರಂತೆ. ಆಗ ಕೃಷ್ಣನಾಗಿದ್ದ ಅಜ್ಜ, ಅಯ್ಯಾ ರುಕ್ಮ! ನಿನ್ನ ಮಾತಿನಲ್ಲೇ ಅದಕ್ಕೆ ಉತ್ತರವುಂಟು! ನೀನು ಅದನ್ನು ಗಮನಿಸಿದಂತಿಲ್ಲ... ಗೋಪಸ್ತ್ರೀ ಪರಿವೇಷ್ಟಿತ ನಾದಾಗ ನಾನು ಹಾಗೆ!!! ಈಗ ನಿನಗೆ ನನ್ನ ಮೂಗಿನ ತುದಿಯಲ್ಲಿ ಬುಲಾಕು ಕಾಣಿಸುತ್ತದೆಯಾದರೆ, ನೀನೂ ಪುರುಷನಲ್ಲ.ಗೋಪಸ್ತ್ರೀಯೇ ಆಗಿರಬೇಕು!! ಎಂದರಂತೆ. ಆಗ ಕುಪಿತನಾದ ರುಕ್ಮ ಎದ್ದೇ ಬಿಟ್ಟ!! ನಾನು ಈ ಕೃಷ್ಣನಲ್ಲಿ ಮಾತಾಡುವುದೇ ಇಲ್ಲ ಎಂದು ಹೊರಟರಂತೆ! ಆಗ ಭಾಗವತರು ಅಜ್ಜನ ಮುಖ ನೋಡಲು, ಪ್ರಸಂಗ ಮುಗಿಸುವ ಯೋಚನೆಯಿಂದ ಅಜ್ಜ, " ತಮ್ಮ ಬೋಳಾದ ತಲೆಯ ಮೇಲೆ ಕೈಯಾಡಿಸುತ್ತಾ, ಈ ರುಕ್ಮನಿಗೂ ಹೀಗೇ ಆಗಲಿ ಎಂದು ನಗೆಯಾಡುತ್ತಾ" ಮಂಗಲ ಹಾಡಲು ಹೇಳಿದರಂತೆ.

**ಬರಹ – ಅಜಿತ್ ಕಾರಂತ್**

ನೀವು ವೃತ್ತಿಪರ ಅಥವಾ ಹವ್ಯಾಸಿ ಕಲಾವಿದರೇ? ನಿಮ್ಮ ಕಲ್ಯಾಣದಲ್ಲೂ ಇಂತಹ ಸ್ವಾರಸ್ಯಕರ ಸನ್ನಿವೇಶಗಳಿವೆಯೇ? ನಿಮಗೂ ಬರೆಯುವ ಹವ್ಯಾಸವಿದೆಯೇ?. ಹಾಗಾದರೆ, ಇಂತಹ ಮರೆಯಲಾದ ಸಣ್ಣ ಪುಟ್ಟ ಅನುಭವಗಳನ್ನು ನಮ್ಮೊಂದಿಗೆ ಹಂಚಿಕೊಳ್ಳಿ. ನಿಮ್ಮ ಅಪೂರ್ವ ಕ್ಷಣಗಳನ್ನು ನಾವು ದಾಖಲಿಸುತ್ತೇವೆ. ನಿಮ್ಮ ಬರಹಗಳನ್ನು ನಮ್ಮ ವಾಟ್ಸಾಪ್ ನಂಬರ್ ಗೆ ಕಳುಹಿಸಿ– 9449686807